# ನೂಪುರ ಭ್ರಮರಿ



ಮೇ - ಜೂನ್ ೨೦೦೭
ಸಂಚಿಕೆ-೩

## ನರ್ತನ ಲೋಕದಲ್ಲೊಂದು ಪರಿಭ್ರಮಣ

ಖಾಸಗಿ ಪ್ರಸಾರದ ದ್ವೈಮಾಸಿಕ

ಸಂಪಾದಕಿ : ಮನೋರಮಾ ಬಿ. ಎನ್



ಅಭಿನಯವದೆಂದೆನಲು ಜೀವರಸ ಸುಧೆಯುಕ್ಕು
ಅಭಿಮಾನದಿಂ ಕಾಯೆ ಕಲೆಯ ಚೆಲು ನೆಲೆಯಕ್ಕು
ಅಭಿಸರಣವಾತ್ಮಕುಂ ಶಾಂತತೆಯ ನೆಲೆಗಾಣ್ಬ
ಚಿಂತನೆಯ ಮಾರ್ಗವಕ್ಕುಂ
ಅಭಿದಾನವಕ್ಕದುಂ ಸಾಧಿಪರ ಮತಿಗೆನಲು
ಕಬಳವದು ಜ್ಞಾನಿಗುಂ ಸಂಸ್ಕೃತಿಯ ಕಾಣ್ಬಗುಂ
ಸಬಲವದು ಚಿತ್ತವೃತ್ತಿಯತೋರಮಿಗೆ
ಜಗದ ದೃಶ್ಯಮಂ ಪ್ರತಿಬಿಂಬಿಸಲ್

– ದಾಸಜ

ನೂಪುರ ಭ್ರಮರಿ, ಸಾನ್ನಿಧ್ಯ ಪ್ರಕಾಶನ, ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ, ಮಡಿಕೇರಿ, ಕೊಡಗು, 571201,
ಫೋನ್ ನಂ 9880592986,
ಇ-ಮೈಲ್ ವಿಳಾಸ: manu.manorama@gmail.com

## ಮಂಜೀರ

**ಆತ್ಮೀಯರೇ,**

**ಯಾವುದೇ ಕ್ಷೇತ್ರವನ್ನಾದರೂ ತೆಗೆದುಕೊಳ್ಳಿ... ಕಾಲೆಳೆಯುವವರ ಸಂಖ್ಯೆಗೆ ಕಡಿಮೆಯೇನಿಲ್ಲ. ಪತ್ರಿಕೋದ್ಯಮ, ನೃತ್ಯಗಳೂ ಇದಕ್ಕೆ ಹೊರತಲ್ಲ. ಬಹಳಷ್ಟೂ ಸಲ ಸೃಜನಶೀಲತೆಯನ್ನೂ ಕದಿಯುವ ಅಪಾಯಗಳಿರುತ್ತವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮ ಸೃಜನಶೀಲತೆಯ ಅಭಿವ್ಯಕ್ತಿಯ ನಂತರ ಬೇರೆಯವರಿಗೆ ಅದರ ಬಗ್ಗೆ ಜ್ಞಾನೋದಯವಾಗುವುದು! ವಿಪರೀತವೆಂದರೆ ಅಂತವುಗಳನ್ನು ತಮ್ಮದೇ ಸ್ವಂತ ಎಂಬ ರೀತಿಯಲ್ಲಿ ಬಳಸಿಕೊಳ್ಳುವುದು! ಇದು ವಿಪರ್ಯಾಸವೋ ಅಥವಾ ಅಂಟಿದ ಸಂಪ್ರದಾಯವೋ ತಿಳಿಯದು. ಒಟ್ಟಿನಲ್ಲಿ ಇಂತಹ ಸಂಗತಿಗಳೇ ಪವಿತ್ರ ಕ್ಷೇತ್ರಗಳಿಗೆ ಅಂಟಿದ ಕಳಂಕವನ್ನು ಮತ್ತಷ್ಟು ಹೆಚ್ಚಿಸುತ್ತಿರುವುದು ಖೇದಕರ. 'ಭ್ರಮರಿ' ಗೆ ಇಂತಹ ಸಂಗತಿಗಳು ಹೊಸದಲ್ಲವಾದರೂ, ನೋವುಗಳು ಉಳಿದುಹೋಗುವುದರಲ್ಲಿ ಸಂಶಯವಿಲ್ಲ.**

**ವಿಷಯವೊಂದರ ಶೋಧನೆಯ-ಸಂಶೋಧನೆಯನ್ನು ಇನ್ನೊಂದೆಡೆ ಪುನರ್ ಬಳಸುವಲ್ಲಿ ಸೌಜನ್ಯದ ಸಂಭೋಧನೆಗಳು ಬಳಸಲ್ಪಟ್ಟ ಕೃತಿಯ ಅಧ್ಯಯನ ಮೌಲ್ಯವನ್ನು ಹೆಚ್ಚಿಸುತ್ತವೆ. ಈ ಸೌಜನ್ಯ ಯಾವುದೇ ವ್ಯಕ್ತಿಯ ಅಥವಾ ವಿಷಯದ ಸೃಜನಶೀಲತೆಯನ್ನು ಬಳಸಿಕೊಳ್ಳುವಾಗಲೂ ಬೇಕು. ಇಲ್ಲವಾದರೆ ನಂಬಿಕೆಯ ಅಡಿಪಾಯ ಕುಸಿದುಹೋಗುವುದು ಖಂಡಿತ.**

ಆದರೂ ಸಹೃದಯ ಓದುಗರ ಪ್ರತಿಕ್ರಿಯೆಗಳು ನಮ್ಮ **'ಭ್ರಮರಿ'**ಗೆ ಮತ್ತಷ್ಟು ಹರಿದು ಬಂದಿದೆ. ನರ್ತನ ಜಗತ್ತಿಗೊಂದು ಇಂತಹ ಸದಭಿರುಚಿಯ ಪತ್ರಿಕೆಯ ಅಗತ್ಯವಿತ್ತು ಎನ್ನುವ ಪ್ರೋತ್ಸಾಹದ ನುಡಿಗಳು ಬೆನ್ನು ತಟ್ಟುತ್ತಿವೆ. ಬೆಂಗಳೂರಿನಿಂದ ಸುಗಮ ಸಂಗೀತ ಕ್ಷೇತ್ರದ ದಿಗ್ಗಜೆ ಶ್ಯಾಮಲಾಭಾವೆ, ಉಡುಪಿಯ ನೃತ್ಯ ವಿಮರ್ಶಕಿ ಪ್ರತಿಭಾ ಸಾಮಗ, ಶಿವಮೊಗ್ಗದ  ನಾಟ್ಯಾಚಾರ್ಯ ಜನಾರ್ಧನ್, ಪತ್ರಕರ್ತ ಮಿತ್ರರಾದ ಹರೀಶ್ ಆದೂರು, ದುರ್ಗಾಕುಮಾರ್ ನಾಯರ್‌ಕೆರೆ ಮುಂತಾದವರು ಸಲಹೆ, ಸ್ಫೂರ್ತಿ



ನೀಡಿದ್ದಾರೆ. ಇದಕ್ಕೆ ಪೂರಕವಾಗಿಯೋ ಎಂಬಂತೆ ಸಾಹಿತಿ ನಡಿಬೈಲು ಉದಯಶಂಕರ್ ಮತ್ತು ಇನ್ನೀರ್ವರು ಮಿತ್ರರು ಪತ್ರಿಕೆಯ ಈ ಸಂಚಿಕೆಯ ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ. ಪತ್ರಿಕೆಯನ್ನು ನಿರೂಪಿಸುವ ಹಿಂದಿನ ಶ್ರಮವನ್ನು ಗುರುತಿಸಿ ಆರ್ಥಿಕವಾಗಿಯೂ ಸಹಕಾರ ನೀಡಿದ ಹಿತೈಷಿಗಳೆಲ್ಲರಿಗೂ ಕೃತಜ್ಞತೆಯ ಸಾದರ ನಮನಗಳು.

ಈ ಹಿಂದಿನ ಸಂಚಿಕೆಗೆ ಪತ್ರಿಸಿ ಹೇಳಿದವರು ಕಡಿಮೆಯಾದರೂ, ಫೋನಾಯಿಸಿ, ಈ ಮೂಲಕ ಓದುಗರ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇವೆಂಬ ಭರವಸೆ ನೀಡಿದ್ದಾರೆ. ಆದರೂ ಬಹಳಷ್ಟು ಸಹೃದಯರು ತಮ್ಮ ಮನೆಯ ಅಂಗಣಕ್ಕೆ ಪತ್ರಿಕೆ ತಲುಪಿದ ಬಗ್ಗೆ  ತಿಳಿಸದಿರುವುದರಿಂದ ಪತ್ರಿಕೆಯನ್ನು ಸಮಯಕ್ಕೆ ಸರಿಯಾಗಿ ತಲುಪಿಸುವಲ್ಲಿ ವಿಳಂಬವಾಗುತ್ತಿದೆ. ಅಂಚೆ ಮೂಲಕ ಕಳಿಸುವಾಗ ಪತ್ರಿಕೆ ಸಿಗದೇ ಹೋದ ಸಂದರ್ಭಗಳೂ ಇದೆ. ಹಾಗಾಗಿ ಪತ್ರಿಕೆಯ ಜವಾಬ್ದಾರಿ ನಿರೂಪಣೆಗಾಗಿ ತಮ್ಮ ಸಹಕಾರ ಈ ನಿಟ್ಟಿನಲ್ಲಾದರೂ ಮುಂದುವರಿದರೆ ಸಹಕಾರಿ.  ನಿಮ್ಮ ಒಂದು ಅಂಚೆ ಕಾರ್ಡು, ಒಂದು ಫೋನು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ. ಜೊತೆಗೆ ಪತ್ರಿಕೆಯನ್ನು ಗುಣಮಟ್ಟದ ದೃಷ್ಟಿಯಿಂದ ಶ್ರೀಮಂತಗೊಳಿಸಲು ತಮ್ಮ ಹೆಜ್ಜೆ ನಮ್ಮೊಂದಿಗೆ ಇದ್ದೀತು ...ಅಲ್ಲವೇ?

**ನೀವೂ ಬರೆಯಿರಿ...   ಎಂದು ಕಲಾವಿದರನ್ನು, ನೃತ್ಯಶಿಕ್ಷಕರನ್ನು ಕೇಳಿಕೊಂಡದ್ದಿದೆ. ಆದರೆ ಬಹಳಷ್ಟು ಸಲ ಹಿಂದೇಟು ಹಾಕಿದ್ದು ಕಂಡುಬಂದಿದೆ. ಏಕೆ?... ಭಯವೇ? ಮುಜುಗರವೇ? ಪತ್ರಿಕೆಯ ಗುಣಮಟ್ಟದ ಬಗ್ಗೆ ಸಂಶಯವೇ? ಅಥವಾ ಪತ್ರಿಕೆ ಎಷ್ಟು ದಿನ ಮುಂದುವರಿದೀತೆಂಬ ಅಸ್ತಿತ್ವದ ಪ್ರಶ್ನೆಯೇ? ಏನಿದ್ದರೂ ಮುಕ್ತವಾಗಿ ಹೇಳಿಕೊಳ್ಳಿ...ನಿಮ್ಮ ಅರಿವಿಗೆ ಬಂದಂತಹ ನೃತ್ಯ ವಿಚಾರಗಳು ಏನೇ ಇರಲಿ, ಚಿಂತನೆಯ ಒರೆಗೆ ಹಚ್ಚುವ ಸಂಗತಿಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ...ಕ್ಲೀಷೆಯೆನಿಸಿಕೊಳ್ಳುವ ನೃತ್ಯಕಾರ್ಯಕ್ರಮ ವಿಮರ್ಶೆಗಳನ್ನು ಹೊರತುಪಡಿಸಿದಂತೆ ಸದಭಿರುಚಿಯ ಲೇಖನ ,ಅಭಿಪ್ರಾಯ, ಚರ್ಚೆ ಏನೇ ಇದ್ದರೂ**

ಅದನ್ನು ಹಂಚಿ ಹರಡಿ. ಹಿಂದೊಮ್ಮೆ ಹೇಳಿದಂತೆ, ಗುರು ಕಲಾವಿದರಿಗಷ್ಟೇ ಅಲ್ಲದೆ, ಜನಸಾಮಾನ್ಯರಿಗೂ ನೃತ್ಯವನ್ನು ಒಯ್ದು ತಲುಪಿಸಬೇಕೆಂಬ ಹಂಬಲವೇ ಹೊರತು ಬೇರಾವ ಲಾಭದ ಉದ್ದೇಶವೂ ಇಲ್ಲ.

ಕಲರ್ ಪ್ರಿಂಟ್, ಒಂದಷ್ಟು ವರ್ಣರಂಜಿತ ಫೋಟೋಗಳು ನೃತ್ಯ ಪತ್ರಿಕೆಯ ಆವರಣವನ್ನು ಚೆಂದ ಮಾಡೀತು ಎಂಬ ಅಭಿಪ್ರಾಯಗಳು ಬಂದಿವೆ. ಆದರೆ ಪತ್ರಿಕೆಯ ಆವರಣಕ್ಕಿಂತ ಹೂರಣವನ್ನು ಚೆಂದ ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳು ಮುಖ್ಯ ಎನ್ನುವುದು ಕೆಲವು ಮಿತ್ರರ ಅಭಿಮತ. ಏಕೆಂದರೆ ಆವರಣ ಚೆಂದ ಕಾಣುವ ಬಹಳಷ್ಟು ಪತ್ರಿಕೆಗಳು ತನ್ನ ಗುಣಮಟ್ಟವನ್ನು ಕಾದುಕೊಳ್ಳುವಲ್ಲಿ ಸೋತಿದೆ ಎನ್ನುವುದು ಅವರ ನಂಬಿಕೆ. ಹಾಗಾಗಿ 'ಭ್ರಮರಿ'ಯದ್ದೇನಿದ್ದರೂ ಮೊದಲು ಸತ್ವಯುತವಾದ ಹೂರಣದೆಡೆಗೆ ಗಮನ. ಪತ್ರಿಕೆಯೊಂದನ್ನು ನೋಡಿ ತೆಗೆದು ಪಕ್ಕಕಿಟ್ಟುಕೊಳ್ಳುವಂತಾದರೆ ಅದು ಪತ್ರಿಕೋದ್ಯಮಕ್ಕೂ, ನಾವು ಮೆಚ್ಚುವ ಆಸಕ್ತಿ, ಆದರ್ಶಗಳಿಗೂ ಅಷ್ಟು ಒಳಿತಲ್ಲ ಎನ್ನುವುದು ನಮ್ಮ ಅನಿಸಿಕೆ. ಮುಂದಿನ ದಿನಗಳಲ್ಲಿ ಆವರಣವನ್ನೂ ಚೆಂದ ಮಾಡುವತ್ತ ಸಾಧ್ಯವಾದಷ್ಟು ಪ್ರಯತ್ನಿಸುತ್ತೇವೆ.

ಪತ್ರಿಕೆ ಇನ್ನೂ ಪ್ರಾರಂಭದ ಹಂತದಲ್ಲಿರುವುದರಿಂದ ಮತ್ತು ಅದರ ಬೇರುಗಳು ಗಟ್ಟಿಯಾಗಬೇಕಿರುವುದರಿಂದ ಸದ್ಯದ ಹರಿಸ್ಥಿತಿಯಲ್ಲಿ ಖಾಸಗಿ ಪ್ರಸಾರಕ್ಕಷ್ಟೇ ಮುಂದುವರಿಯಲಿದೆ. ಹಾಗಂದ ಮಾತ್ರಕ್ಕೆ ಪತ್ರಿಕೆಯ ಉಳಿವಿನ ಬಗ್ಗೆ ಅಪನಂಬಿಕೆಗಳು ಬೇಡ. ಏಕೆಂದರೆ, ಪತ್ರಿಕೆಯನ್ನು ನೋಂದಾಯಿಸುವ ಕಾರ್ಯಗಳು ಜಾರಿಯಲ್ಲಿವೆ.

ಪತ್ರಿಕೆಗೆ ಭಾರೀ ಆರ್ಥಿಕ ಹಿನ್ನಲೆಯೂ ಇರದಿರುವುದರಿಂದ, ಸ್ವಂತ ಖರ್ಚು–ಉಳಿತಾಯದಲ್ಲಿ ರೂಪುಗೊಳ್ಳುತ್ತಿರುವುದರಿಂದ ಲೇಖನ ಬರೆಯುವವರಿಗೂ ಉಚಿತವಾಗಿ, ನಿಯಮಿತವಾಗಿ ಪತ್ರಿಕೆ ತಲುಪಿಸುವುದೊಂದೇ ಸದ್ಯದ ಮಟ್ಟಿಗೆ ಸಂಭಾವನೆಯ ಬದಲಾಗಿ ಅರ್ಪಿಸುವ ಧನ್ಯವಾದ. ಈ ಬಗ್ಗೆ ಬೇಸರವಿಲ್ಲ ತಾನೇ?

ಇಂತಹ ಪುಟ್ಟ ವಿಷಯಗಳನ್ನು ತಮ್ಮಲ್ಲಿ ಅರಿಕೆ ಮಾಡಿಕೊಂಡರಷ್ಟೇ



ಓದುಗ ಸಹೃದಯರು ಅರ್ಥ ಮಾಡಿಕೊಂಡಾರು ಎನ್ನುವ ಧಾರ್ಷ್ಟ್ಯ ನಮ್ಮದಲ್ಲ. ಬದಲಾಗಿ ಪತ್ರಿಕೆಯ ಇತಿಮಿತಿಗಳನ್ನು ತಿಳಿಸುವುದು ಕರ್ತವ್ಯವೆಂಬುದು ನಮ್ಮ ಭಾವನೆ. ನಿಮ್ಮ ಹೃದಯ ಶ್ರೀಮಂತಿಕೆಯ ಮುಂದೆ ನಮ್ಮ ಪ್ರಯತ್ನಗಳು ಫಲ ಕೊಡಬೇಕೆನ್ನಿಸುವುದಷ್ಟೇ ನಮ್ಮ ಆಶಯ. ಪತ್ರಿಕೆಯ ನಿರೂಪಣೆಯ ಹಿಂದೆ ನಮ್ಮಷ್ಟೇ ಜವಾಬ್ದಾರಿ ನಿಮಗೂ ಇದೆ. ಸಾಂಸ್ಕೃತಿಕ ಪತ್ರಿಕೆಗಳ ಸಾಲಿನಲ್ಲಿ 'ನೂಪುರ ಭ್ರಮರಿ' ಮೈಲಿಗಲ್ಲಾದರೆ ಅದರ ಯಶಸ್ಸು ನಿಮಗೆ ಸೇರಬೇಕಾದದ್ದು ಅನ್ನುವುದೂ ನೆನಪಿರಲಿ.

ಹಾಗಾದರೆ ಬರೆಯುತ್ತೀರಿ ತಾನೇ?.. ಕ್ಲೀಷೆ, ಸಾಮಾನ್ಯ ವಿಮರ್ಶೆಗಳನ್ನು ಬದಿಗಿಟ್ಟು.. ಮನವನ್ನು ಮುಕ್ತವಾಗಿ ತೆರೆದಿಟ್ಟು...ನಮ್ಮ ಹೆಜ್ಜೆಯ ಜೊತೆಯಲ್ಲಿ ಹೆಜ್ಜೆಯಿಟ್ಟು...

ಪ್ರೀತಿಯಿಂದ ನಿಮ್ಮ

**ಮನೋರಮಾ ಬಿ. ಎನ್**



* * *

**ಹೆಜ್ಜೆಯದು ಮೂಡುವುದು ಪದಘಾತದಿಂದೆನಲು**
**ಗೆಜ್ಜೆಗದು ಆಶ್ರಯವು ನಡೆವನುಡಿ ನಡೆಯೆನಲು**
**ಹೆಜ್ಜೆಹೆಜ್ಜೆಯ ನೆರವು ಮುನ್ನಡೆಯೆ**
**ಮಾನವಗೆಮಗೆ ನರ್ತನದ ಕಾರ್ಯಕುಂ**
**ಸಜ್ಜೆಯಾ ಸವಿಸವಿವ ಸೊಗಸಿನ ನಡೆ ಚೆಲುವು**
**ಹೆಜ್ಜೆಯಾ ಅಡಿ ಅಡಿಯ ಲೆಖ್ಖವದು ಬಹುವಿಧವು**
**ಹೆಜ್ಜೆಯೊಳ ಹೆಜ್ಜೆಯೋ ತಾಳಲಯ ಭಾವಮಯ**
**ಕಾವ್ಯಮಯ ನರ್ತನಕುದುಂ...**

**–ದಾಸಜ**

## ಮರಾಠಿ ಪ್ರೀತಿ ಸಂಸ್ಕೃತಿಯ ಗಣಿ ಲಾವಣಿ

✍ ಶ್ರೀಲಕ್ಷ್ಮೀ ಎಂ.

ಇದು ಬರಿ ಟಿವಿ, ಸಿನೆಮಾಗಳ ಯುಗ, ಜಾನಪದ ಕಲೆಗಳೆಲ್ಲ ಈಗ ಮೂಲೆ ಸೇರಿಬಿಟ್ಟವು  ಅಂತ ಹಳಹಳಿಸುವವರಿಗೆ, ಜಾನಪದ ಏನಿದ್ದರೂ ಅನಕ್ಷರಸ್ಥರಿಗೆ ಅಂತ ಮೂಗಳೆಯುವವರಿಗೆ ಇಲ್ಲೊಂದು ಸವಾಲಿದೆ. ಅದು ಮಹಾರಾಷ್ಟ್ರದಲ್ಲಿ. ಲಾವಣಿ ಅನ್ನೋ ಶಬ್ಧ ಕೇಳಿಯೇ ಇಲ್ಲಿನ ಜನ ಪುಳಕಿರಾಗೋದು ನೋಡಿದರೆ ಜಾನಪದ ಕಲೆಗಳಿಗೆ ನೋಡುಗರ ಕೊರತೆಯಿದೆ ಅನ್ನೋ ವಾದ ಶುದ್ಧ ಸುಳ್ಳು ಅಂತ ಮನವರಿಕೆ ಆಗುತ್ತದೆ.

ಡಾ/ ಬಲವಂತ ಗಾರ್ಗಿ ವಿವರಿಸಿದಂತೆ 'ಲಾವಣಿ ಚುರುಕಿನ ಅಂಗ ಚಲನೆಯುಳ್ಳ ಪ್ರೇಮ ಪ್ರಣಯ ಭಾವಗಳನ್ನು ಪ್ರಧಾನವಾಗಿ ಅಭಿವ್ಯಕ್ತಿಸುವ ಕಾವ್ಯ ಕಥನ ಶೈಲಿಯ ನೃತ್ಯ'.

ಹದಿನೇಳನೆಯ ಶತಮಾನದ ಕೊನೆಯಲ್ಲಿ ಔರಂಗಜೇಬ್ ಹಾಗೂ ಶಿವಾಜಿಯ ನಡುವಿನ ನಿರಂತರ ಕಾಳಗದ ಹೊತ್ತಿಗೆ, ಸೈನಿಕರ ಮನರಂಜನೆಗಾಗಿ ಹುಟ್ಟಿಕೊಂಡ ತಮಾಷಾದ (ನಮ್ಮ ಯಕ್ಷಗಾನದ ಸ್ವರೂಪದ್ದು) ಅತೀ ಮುಖ್ಯ ನೃತ್ಯ ಭಾಗವೇ ಲಾವಣಿ.

ಚುರುಕಿನ ಬೀಟ್ಸ್‌ಗಳು, ತಾರಕದ ಹಾಡುಗಾರಿಕೆ, ಪ್ರಣಯದ ಸವಿಸ್ತಾರ ಅಭಿನಯ, ನರ್ತನದ ನಡುನಡುವೆ ಪ್ರೇಕ್ಷಕರೊಂದಿಗೆ ಸಂಭಾಷಣೆ ಲಾವಣಿಯ ವಿಶೇಷತೆಗಳು. ಇದರಲ್ಲಿ ನರ್ತಕಿಯರು ಸಂಭಾಷಣೆ ಮುಗಿಯುತ್ತಿದ್ದಂತೆ ತಟಕ್ಕನೆ ಅತ್ಯಂತ ಚುರುಕಿನ ನೃತ್ಯ ಆರಂಭಿಸಿ ತಮ್ಮ  ಪ್ರದರ್ಶನಕ್ಕೆ ಪಂಚ್ ನೀಡುತ್ತಾರೆ.

ಇಂದು ಮನೋರಂಜನೆ, ಜನಶಿಕ್ಷಣ ಹಾಗೂ ನೀತಿಭೋಧೆಯ ಉದ್ದೇಶಗಳಿಗೂ ಈ ಪ್ರಕಾರವನ್ನು ಬಳಸಲಾಗುತ್ತಿದೆ. ಗಣ್, ಗವಳಣ್, ರಂಗಭಾಜಿ, ವಗ್, ಮುಜರಾ ಈ ನೃತ್ಯದ ಅವಿಭಾಜ್ಯ ಅಂಗಗಳು. ನಾಲ್, ತುಂತುಣಾ, ಸಂಬಳ್ ಹಾಗೂ ಗೆಜ್ಜೆ ಇದರಲ್ಲಿ ಬಳಸಲ್ಪಡುವ ಪ್ರಮುಖ ವಾದ್ಯಗಳು. ಇದನ್ನು 'ಖಡೀ ಲಾವಣಿ'ಎಂದೂ ಕರೆಯುತ್ತಾರೆ.



ಇದರದ್ದೇ ಇನ್ನೊಂದು ರೂಪ 'ಬೈತಕೀ ಲಾವಣಿ' (ನಮ್ಮ ಜಾಗರದಂತದ್ದು) ಕುಳಿತು ನೀಡುವ ಪ್ರದರ್ಶನ.

ಲಾವಣಿ ಜಾನಪದ ನೃತ್ಯವಾದರೂ ಅಭಿಜಾತದ ಎಲ್ಲಾ ಪ್ರಮುಖ ಅಂಶಗಳನ್ನು ಒಳಗೊಂಡು ಪರಿಪೂರ್ಣ ನೃತ್ಯ ಶೈಲಿಯೇ ಆಗಿ ಬೆಳೆದು ನಿಂತಿದೆ. ಮಹಾರಾಷ್ಟ್ರದಲ್ಲಿ ಹದಿನೆಂಟನೇಯ ಶತಮಾನದ ಶಾಹು ಮಹರಾಜ್ ಹಾಗು ನಂತರದ ಪೇಶ್ವೆಗಳ ಕಾಲ ಈ ಪ್ರಕಾರದ ಉಚ್ಛ್ರಾಯದ ಕಾಲವಾಗಿತ್ತು. ಮುಂದೆ ರಾಜಾಶ್ರಯ ತಪ್ಪಿದ ನಂತರ ಕಲಾವಿದರ ಸ್ಥಿತಿ ಶೋಚನೀಯವಾಯ್ತು. ೨೦ನೇಯ ಶತಮಾನದ ಮೊದಲಾರ್ಧದಲ್ಲಿ ವಿಷ್ಣುದಾಸ್ ಭಾವೆಯಂತಹ ಸುಧಾರಕರಿಂದಾಗಿ ಮತ್ತೆ ಪ್ರಾಮುಖ್ಯತೆಗೆ ಬಂದ ಲಾವಣಿ ಜನರ ಮೆಚ್ಚುಗೆ ಹಾಗೂ ಅಭಿಮಾನ ದೊರಕಿಸಿಕೊಂಡಿತು.

ಇಂದಿಗೂ ಪ್ರದರ್ಶನಗಳಲ್ಲಿ ಭರ್ಜರಿ ಜನಜಂಗುಳಿಯ ನಡುವೆ ಚಪ್ಪಾಳೆ ತಟ್ಟಿ ಉತ್ಸಾಹದಿಂದ ತಾವೂ ನರ್ತಿಸಲು ತೊಡಗುವ ಜನರಿಗೇನೂ ಇಲ್ಲಿ ಕೊರತೆಯಿಲ್ಲ. ಕಲಾವಿದರನ್ನು ಪ್ರೋತ್ಸಾಹಿಸುವುದರಲ್ಲಿ ಇಲ್ಲಿನ ಜನರ ಹೃದಯ ವೈಶಾಲ್ಯ ಪ್ರಶಂಸನೀಯ. ಇಲ್ಲಿನ ಸಾಂಗ್ಲಿ,ಸತಾರ್, ಕೊಲ್ಲಪುರ, ಖಾಂದೇಶ್, ಮರಾಠಾವಾಡ ಮೊದಲಾದವೆಡೆ ತಮಾಷಾ ಕಲಾವಿದರ ಫ಼ಡ್ ತಾಂಡಾ ಅಥವಾ ಗ್ರಾಮಗಳು ಇಂದಿಗೂ ಈ ಕಲೆಯನ್ನೇ ಜೀವನಾಧಾರವಾಗಿಸಿಕೊಂಡಿವೆ.

ಸುರೇಖಾ ಪುಣೇಕರ್, ಛಾಯಾ ಮಾಯಾ ಕುಟೇಗಾವಂಕರ್, ಮಾಯಾ ಜಾಧವ್, ಮೊದಲಾದ ಕಲಾವಿದರಿಂದಾಗಿ ಲಾವಣಿ ವಿದೇಶಗಳಲ್ಲೂ ಪ್ರಸಿದ್ಧಿ ಪಡೆದಿದೆ. ಮರಾಠಿಗರು ಹೇಳುವಂತೆ  'ಮಹಾರಾಷ್ಟ್ರಾಚ ಲೋಕಲ್ಯಾಟಾಚಿ ಶಾನ್,ಆಣಿ ಜಾನ್ ಮಣ್ಜೆ ಲೋಕನೃತ್ಯ ಲಾವಣಿ' .

* * *





# ಹಸ್ತ ಮಯೂರಿ



## ಅರ್ಧ ಪತಾಕ ಹಸ್ತ

**ಲಕ್ಷಣ:** ಕಿರು ಮತ್ತು ಉಂಗುರ ಬೆರಳನ್ನು ಮಡಿಸಿ, ಉಳಿದೆಲ್ಲಾ ಬೆರಳುಗಳನ್ನು ಜೋಡಿಸಿ ನೇರವಾಗಿ ಚಾಚಿ ಹಿಡಿಯುವುದು.

**ವಿನಿಯೋಗ:** ಚಿಗುರು ಎಲೆಗಳು, ಹಲಗೆ, ದಡ, ಇಬ್ಬರೆಂದು ಸೂಚಿಸುವುದು, ಗರಗಸ ಕತ್ತಿ, ಧ್ವಜ (ಬಾವುಟ ಲಾಂಛನ), ಶಿಖರ, ಕೋಡುಗಳು, ದೇವಾಲಯದ ಉನ್ನತ ಶಿಖರ, ಎರಡುಯಾಮ, ನಾಸಿಕ, ಉಪನ್ಯಾಸ, ಪೀತವರ್ಣ, ದೀಪ, ಕುಮಾರಸ್ವಾಮಿ, ಶಿವ, ಅಧರ. ನಾಟ್ಯಶಾಸ್ತ್ರ ಮತ್ತು ಹಸ್ತಮುಕ್ತಾವಳಿ ಗ್ರಂಥಗಳಲ್ಲಿ ಈ ಹಸ್ತದ ಪ್ರಸ್ತಾಪವಿಲ್ಲ.

ಸಂಕರ ಹಸ್ತವೆಂಬ ಪ್ರಕಾರದಲ್ಲಿ ಅರ್ಧಪತಾಕ ಹಸ್ತದಿಂದ ಮೊಣಕಾಲನ್ನು ತಾಕಿಸಿದಲ್ಲಿ ಶೂದ್ರವರ್ಣವೆಂಬ ಅರ್ಥ ಬರುತ್ತದೆ. ಪುರೋಭಾಗದಲ್ಲಿ ಈ ಹಸ್ತವನ್ನು ಆಡಿಸಿದರೆ ವರ್ಷಋತುವೆಂಬ ಅರ್ಥ ಬರುತ್ತದೆ.

ನರ್ಮದಾ ನದಿ, ಜಂಬೂ ವೃಕ್ಷ, ರಾಜರಾದ ಮರುತ ಮತ್ತು ಅಜ, ವಾಯುದೇವ, ಕೇತು ಹಸ್ತಗಳ ಸೂಚನೆಗೂ ಅರ್ಧಪತಾಕವನ್ನು ಬಳಸುತ್ತಾರೆ. ಗ್ರೀಷ್ಮಋತು ವನ್ನು ಸೂಚಿಸಲು ಪಾರ್ಶ್ವಗಳಲ್ಲಿ ಅರ್ಧಪತಾಕಗಳನ್ನು ಹಿಡಿದು ಕಂಪಿಸಬೇಕು.

ಎಡಗೈಯನ್ನು ಸೊಂಟದ ಮೇಲಿಟ್ಟು ಬಲಗೈಯಲ್ಲಿ ಅರ್ಧಪತಾಕವನ್ನು ಹಿಡಿಯುವುದು ಪರಶುರಾಮಾವತಾರ ಹಸ್ತವೆನಿಸುತ್ತದೆ. ಮೂಲಾನಕ್ಷತ್ರವನ್ನು ಸೂಚಿಸಲು ಅರ್ಧಪತಾಕ ಹಸ್ತದಿಂದ ತೋರುಬೆರಳು ಮತ್ತು ಮಧ್ಯಬೆರಳ ತುದಿಯನ್ನು ಸ್ವಲ್ಪ ವರ್ತುಲ ಮಾಡಬೇಕು.

ಯಕ್ಷಗಾನದಲ್ಲೂ ಈ ಹಸ್ತ ಪ್ರಚಲಿತದಲ್ಲಿದ್ದು ಪ್ರವೇಶಿಸುವುದು, ಕಣ್ಣು, ಗೆಳೆತನ, ದಾಂಪತ್ಯ, ತುಂಬಿಸುವಿಕೆ ಇತ್ಯಾದಿ ಸಂದರ್ಭಕ್ಕೆ ಬಳಸುತ್ತಾರೆ. ಓಡಿಸ್ಸಿ ನೃತ್ಯ ಪದ್ಧತಿಯಲ್ಲಿ ಅರ್ಧಪತಾಕವನ್ನು ಹೆಬ್ಬೆರಳಿಗೆ ಸೇರಿಸಿ 2 ಎಂಬ ಅರ್ಥದಲ್ಲಿ ಹಿಡಿದರೆ ಚಂಡ ಅಥವಾ ದಂಡ ಹಸ್ತವೆಂದೂ, ಕಥಕ್ಕಳಿಯಲ್ಲಿ ಶಿಖರವೆಂದೂ ಹೇಳಲಾಗಿದೆ.

ಸಾಮಾನ್ಯಜೀವನದಲ್ಲಿ ಈ ಹಸ್ತದ ಬಳಕೆ ಕಡಿಮೆ.

*——————————*





# ನೃತ್ಯ ಪರೀಕ್ಷೆಗಳ ಅಧ್ವಾನ : ಒಂದು ನೋಟ

✍ 'ಮನೂ' ಬನ

**ನೃತ್ಯ ವಿದ್ಯಾರ್ಥಿನಿಯರು :**

'ದಶವಿಧ ಅಡವು...?ಹಾಗಂದ್ರೆ..? ಪರೀಕ್ಷೆಗೆ 15 ದಿವ್ಸ ಉಳಿದಿದೆ.. ಅಷ್ಟರಲ್ಲಿ ಇವನ್ನೆಲ್ಲಾ ಕಲಿಯೋಕಾಗುತ್ತಾ..? ಏನೋ ಒಂದಷ್ಟು ಅಡವು ಮಾಡಿದ್ದಾರೆ. ಹೆಸರೂ ಒಂದಷ್ಟು ಗೊತ್ತಿದೆ. ಆದ್ರೆ ದಶವಿಧ ಅಡವೂ.....ಏನೋಪ್ಪ...ಟೀಚರ್ ಪಾಸ್ ಮಾಡಿಸ್ತೀನಿ ಅಂತ ಹೇಳಿದ್ದಾರೆ. ಈಗ ನೀವು ಹೇಳೋದು ನೋಡಿದ್ರೆ ನಂಗೆ ಹೆದ್ರಿಕೆ ಆಗುತ್ತೆ...ಅಂದ ಹಾಗೆ ದುಡ್ಡು ಕೊಟ್ಟು ಪಾಸ್ ಮಾಡಿಸ್ಲಿಕ್ಕಾಗುತ್ತಾ?

* * *

9 ಗಂಟೆಗೇ ಸ್ಟಾರ್ಟ್ ಆಗ್ಬೇಕಿದ್ದ ಪರೀಕ್ಷೆ ಇನ್ನೂ ಆಗಿಲ್ಲನೋಡಿ..ಎಕ್ಸಾಮಿನರ್ಸ್ ಇನ್ನೂ ಬಂದಿಲ್ವಂತೆ! ಯಾರನ್ನೋ ಬೋರ್ಡ್‌ನವರು ಹಾಕಿದ್ರೂ ಅವ್ರ ಪತ್ತೇನೇ ಇಲ್ಲ. ಕಾದು ಕಾದು ಸುಸ್ತಾಗಿ ಹೋದ್ವಿ. ಹೀಗಾದ್ರೆ ಡ್ಯಾನ್ಸ್ ಮಾಡೋಕೇ ಮೂಡ್ ಆದ್ರೂ ಎಲ್ಲಿಂದ ಬರ್ಬೇಕು? ಹೀಗೆ ಎಕ್ಸಾಮ್ ಲೇಟ್ ಆದ್ರೆ ಕ್ವಶ್ಚನ್ ಪೇಪರ್ ಲೀಕ್ ಆಗಲ್ವಾ..?

* * *

**ಪೋಷಕರು :**

ಅವ್ರ ಮಗ್ಳು ಎಕ್ಸಾಂ ತೆಗೊಂಡೇ ಇಲ್ವಂತೆ! ನೀವೇನೇ ಹೇಳಿ, ಅವ್ಳು ಎಷ್ಟೇ ಪ್ರೋಗ್ರಾಂ ಕೊಡ್ಲಿ, ಒಂದ್ ಪರೀಕ್ಷೆ ಪಾಸ್ ಮಾಡ್ಕೋಬೇಕು. ಜೊತೆಗೆ ರಂಗಪ್ರವೇಶ ಒಂದ್ ಆಗ್ಬಿಟ್ರೆ ಇನ್ನೂ ಒಳ್ಳೇದು..ಹಾಗಾಗಿ ಸೀನಿಯರ್ ಎಕ್ಸಾಂಗೆ ಟೀಚರ್‌ಗೆ ಅಂತ 40 ಸಾವಿರ ಕೊಟ್ಟೆ ನೋಡಿ.. 2 ತಿಂಗ್ಳ ಕ್ಲಾಸು... ಈಗ ನೋಡಿ... ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾಳೆ.

* * *

ನೋಡ್ರೀ.. ಒಬ್ರೇ ಎಕ್ಸಾಮಿನರ್ ಬಂದಿರೋದು..! ಅಟ್‌ಲೀಸ್ಟ್ ಇಬ್ರಾದ್ರೂ ಬೇಕಲ್ವಾ? ಅವ್ರೇ ಅಷ್ಟು ಸ್ಟೂಡೆಂಟ್ಸ್‌ಗಳನ್ನ ಡ್ಯಾನ್ಸ್ ನೋಡಿ ಜಡ್ಜ್ ಮಾಡ್ತಾರೆ..ಅದ್ಕೇ

ನೋಡಿ.. ಆ ಊರಲ್ಲಿ ಲೋಕಲ್ ಡ್ಯಾನ್ಸ್ ಟೀಚರ್ಸನ್ನೇ ಕರ್ದು ತಂದು ಎಕ್ಸಾಮಿನರ್ ಅಂತ ಕೂರ್ಸಿದ್ದಾರೆ. ಇನ್ನೊಂದು ಪ್ರಾಬ್ಲಂ ಅಂದ್ರೆ ಆ ಸೆಂಟರ್‌ಗೆ ಎಕ್ಸಾಮಿನರ್ ಆಗಿ ಬೋರ್ಡ್‌ಂದ ಹಾಕಿಸ್ಕೊಂಡು ಬಂದವ್ರೂ ಅದೇ ಊರಿನವ್ರೇ...! ಅವ್ರ ಸ್ಟೂಡೆಂಟ್ಸೂ ಎಕ್ಸಾಮ್ ಕಟ್ಟಿದ್ದಾರೆ..ಪಾರ್ಷಿಯಾಲಿಟಿ ನಡೆಯೋದಿಲ್ಲ ಅಂತ ಏನು ಗ್ಯಾರಂಟಿ? ನಿಮಗ್ಗೊತ್ತಾ... ಕಳೆದ ಸಲ ಬಂದವ್ರು ದುಡ್ಡು ಕೂಡಾ ಇಸ್ಕೊಂಡಿದ್ರಂತೆ.. ಬೋರ್ಡ್‌ಗೆ ಕಂಪ್ಲೇಂಟ್ ಕೊಟ್ವಿ... ಆದ್ರೆ ಬೆಂಗ್ಳೂರು, ಮೈಸೂರಿಂದ ದೂರ ಇರೋ ಈ ಊರಿಗೆಲ್ಲಾ ಯಾರ್ ಬಂದು ಚೆಕ್ ಮಾಡ್ತಾರೆ..? ಮಾಡಿದ್ರೂ ಯಾರ್ ಸಾಕ್ಷ್ಯ ಹೇಳ್ತಾರೆ..? ಒಟ್ನಲ್ಲಿ ಇದು ಪ್ರತೀವರ್ಷದ ಹಣೆಬರಾಃ...! ’

* * *

**ನೃತ್ಯ ಶಿಕ್ಷಕರು :**

‘ಪರ್ವಾಗಿಲ್ಲ... ಗೊತ್ತಿರೋರೇ ಎಕ್ಸಾಮಿನರ್ಸ್... ಊಟ, ಕಾಫಿ..ಅದೂ,...ಇದೂ.... ಅಂತ ಸರಿಯಾಗಿ ನೋಡ್ಕೊಂಡ್ರಾಯ್ತು.. ಹೇಗೂ ಸೆಂಟರ್‌ನವ್ರು, ಬೋರ್ಡ್‌ನವ್ರೂ ವ್ಯವಸ್ಥೆ ಮಾಡಿರೋಲ್ಲ. ಅಷ್ಟಕ್ಕೂ ಅವ್ರು ಜೂನಿಯರ್ ಎಕ್ಸಾಂ ಕಟ್ಟಿರೋವ್ರನ್ನ ಫೇಲ್ ಮಾಡೋ ಹಾಗಿಲ್ಲ. ಮತ್ತೆ ಪರಿಚಯದವ್ರಿಗೆ ಸ್ವಲ್ಪ ಕನ್ಸೇಷನ್ ಇರುತ್ತೆ ಬಿಡಿ.. ಅಷ್ಟಕ್ಕೂ ಬರೋ ಎಕ್ಸಾಮಿನರ್ಸ್‌ಗೆ ಎಷ್ಟೋ ಸಲ ರಾಗ–ತಾಳಾನೇ ಸರಿಯಾಗಿ ಗೊತ್ತಿರೋಲ್ಲ..’

* * *

‘ಯಾವ ಎಕ್ಸಾಮಿನರ್ಸೋ..? ದೃಶ್ಯಜ್ಞಾನ ಪರೀಕ್ಷೆ ಅರ್ಧ ಗಂಟೆ ಮಾಡಿಸ್ಬೇಕಾದವ್ರು 10 ನಿಮಿಷ ಕೂಡ ಮಾಡೋಲ್ವಲ್ರೀ.. ಅಯ್ಯೋ... ನಮ್ ಸ್ಟೂಡೆಂಟ್ಸ್ ಹೆದ್ರಿ ಹೋಗಿದ್ದಾರೆ..ಪ್ರಾಕ್ಟಿಕಲ್‌ನಲ್ಲಿ ಏನೇನೋ ಕ್ರಾಸ್ ಕ್ವೆಶ್ಚನ್ ಮಾಡಿ, ಸರೀ ಮಾಡಿದ್ರೂ ಮಕ್ಳನ್ನ ಕನ್ ಫ್ಯೂಸ್ ಮಾಡ್ಸಿ ಕಣ್ಣೀರು ಬರ್ಸೋದಾ..? ಪಾಪ.. ಮಕ್ಳು ಸರೀ ಆನ್ಸರ್ ಗೊತ್ತಿದ್ರೂ ಹೇಳೋಕೇ ಹೆದರ್ತಾರೆ.. ಅಂದಹಾಗೆ, ಎಕ್ಸಾಂ ಸೆಂಟರ್‌ಗೆ 3 ದಿನ ಕಳೆದ್ರೂ ಮಾರ್ಕ್ಸ್ ಲಿಸ್ಟ್ ಕೊಟ್ಟಿಲ್ಲ. ಹೆಚ್ಚು ಹೇಳ್ಬೇಕಂದ್ರೆ ಮಾರ್ಕ್ಸ್ ಲಿಸ್ಟನ್ನ ಫಿಲ್ ಮಾಡೋಕೇ ಬರಲ್ಲ...’

* * *



**ಪರೀಕ್ಷಕರು :**

‘ಇಲ್ಲಿ ಎಕ್ಸಾಂ ಸೆಂಟರ್‌ನಲ್ಲಿ ಯಾವ್ದೇ ವ್ಯವಸ್ಥೆ ಮಾಡೋಲ್ಲ. ಬೋರ್ಡ್‌ನವ್ರೂ ಊಟ–ತಿಂಡಿ–ಉಳ್ಕೊಳ್ಳೋಕೇ ಅಂತ ಸರಿಯಾಗಿ ಏನೂ ಕೊಡೋಲ್ಲ. ಸ್ಟೂಡೆಂಟ್ಸ್ ಹೆಚ್ಚಾಗಿದ್ರೆ 10 ದಿನ ಎಕ್ಸಾಂ ಮಾಡೋವಷ್ಟ್ರಲ್ಲಿ ಜೀವ ಬಾಯಿಗೆ ಬರುತ್ತೆ..ಬೋರ್ ಹಿಡ್ದು ಕೊನೇಗೇ ಮಾಡಿಸ್ಬೇಕಲ್ಲಾ ಅಂತ ಮಾಡಿಸ್ಬೇಕಷ್ಟೇ..! ಹಾಗಾಗಿ ಈ ಸಲ ನಾನು ನನ್ ಹತ್ತಿರದ ಊರಿಗೇ ಹಾಕಿಸ್ಕೊಂಡು ಎಕ್ಸಾಮಿನರ್ ಆಗಿ ಬಂದ್ಬಿಟ್ಟೆ.. ಆ ಸೆಂಟರ್ ದೂರ ಆಗುತ್ತೆ...ಈ ಸಲ ಅಲ್ಲಿಗೆ ಯಾರೂ ಹೋಗ್ದೇ ಇದ್ರೆ ಕೊನೆಗೆ ಲೋಕಲ್ ಡ್ಯಾನ್ಸ್ ಟೀಚರ್‌ನ್ನೇ ಎಕ್ಸಾಮಿನರ್ ಆಗಿ ತೆಗೊಂಡಾರು..’

* * *

‘ ಅಷ್ಟಕ್ಕೂ ಎಷ್ಟೋ ಟೀಚರ್ಸ್, ಸ್ಟೂಡೆಂಟ್ಸ್‌ಗಳಿಗೆ ಎಕ್ಸಾಂ ಅಂದ್ರೆ ಪಾಸ್ ಮಾಡ್ಕೊಳ್ಳೋದು, ಅಷ್ಟೇ...ಶುದ್ಧವಾಗಿ ಕಲಿತು ಮಾಡೋವ್ರು ಇದ್ದಾರೆ ಅಂತೀರಾ..? ಉಹುಂ...ಸುಮ್ನೆ ಮಾರ್ಕ್ಸ್ ಹಾಕ್ಬೇಕಷ್ಟೇ!.. ಮಾರ್ಕ್ಸ್ ಹಾಕೋಕಾದ್ರೂ ಏನಿದೆ..? ಈಗ ನಂಗಾದ್ರೂ ಈ ಹೊಸ ಸಿಲೆಬಸ್ ಮಾಡೋಕ್ ಬರುತ್ತಾ?.. ಏನೋ ಒಂದು ಮಾಡ್ತಿದ್ದೀನಿ..’

* * *

**ಸಾರ್ವಜನಿಕರು :**

‘....ಇಷ್ಟೆಲ್ಲಾ ಹಂಗಾಮ ಇರೋ ಪರೀಕ್ಷೆಗಳಿಗೆ ಯಾಕ್ರೀ ಮಕ್ಳನ್ನ ಕಟ್ಟಿಸ್ಬೇಕು..? SSLC ಬೋರ್ಡ್‌ನವ್ರಲ್ವಾ ಎಕ್ಸಾಂ ಕಂಡಕ್ಟ್ ಮಾಡೋದು..? SSLCಗೆಲ್ಲಾ ಅಷ್ಟು ಸ್ಟ್ರಿಕ್ಟ್ ಮಾಡೋವ್ರು ಇದನ್ನ ಯಾಕಾದ್ರೂ ಇಷ್ಟೊಂದ್ ಬೇಜಾವಾಬ್ದಾರಿಯಿಂದ ಮಾಡ್ತಾರೋ...?’

............!

‘....ಅಯ್ಯೋ... ಎಕ್ಸಾಂ ಬೋರ್ಡ್‌ನವ್ರನ್ನ ಬೈಯ್ಯೋದ್ರಲ್ಲಿ ಏನೂ ಆಗಲ್ಲ.. ಎಕ್ಸಾಂ ಸೆಂಟರ್‌ನವ್ರದ್ದೂ ತಪ್ಪಿರುತ್ತೆ.. ಎಕ್ಸಾಮಿನರ್ಸ್ ಯಾರು ಅಂತ ಮೊದ್ಲೇ ಕನ್‌ಫರ್ಮ್ ಮಾಡ್ಕೊಳ್ದೇ ಕಡೇಗಾಲಕ್ಕೆ ಫೋನ್ ಮಾಡಿ ದೂರಿದ್ರೆ ಏನ್ ಪ್ರಯೋಜನ..?

ಅಷ್ಟಕ್ಕೂ ಇದು ಆರ್ಟ್ ಫೀಲ್ಡ್.. ಎಕ್ಸಾಮಿನರ್ಸ್ ಅಂತ ಟ್ರೈನ್ಡ್ ಆಗಿರೋರು ಸಿಗೋದು ಅಷ್ಟು ಸುಲ್ಭಾನಾ..?'

* * * * *

ಇದ್ಯಾವುದೂ ಕಲ್ಪನೆಯಿಂದ ಹುಟ್ಟಿದ ಮಾತುಗಳ ಸರಣಿಯಲ್ಲ. ಬದಲಾಗಿ ಪ್ರತೀ ವರ್ಷದ ಸಂಪ್ರದಾಯವೇನೋ ಎಂಬಂತೆ ಈ ಬಾರಿಯೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ನೃತ್ಯ ಪರೀಕ್ಷೆಗಳಲ್ಲಿ ಕಂಡುಬಂದ ವಾಸ್ತವ, ಹೊರಬರುವ ಸತ್ಯ... ಬಹಳ ಸಲ ವಿವಾದಗಳಾದ ಸಂದರ್ಭಗಳೂ ಇವೆ. ಇವಿಷ್ಟೂ ಸಾಕು.., ನೃತ್ಯ ಪರೀಕ್ಷೆಗಳ ತಿರುಳನ್ನು ಅರಿಯಲಿಕ್ಕೆ...!

ವಿದ್ವಾಂಸರೊಬ್ಬರು ವಿಷಾದದಿಂದ ನುಡಿದದ್ದು... "ಕೆಲವು ಹೆಜ್ಜೆ, ನೃತ್ಯ ಕಲಿತು ಕೆಲವು ಪರೀಕ್ಷೆಗಳನ್ನ ಪಾಸ್ ಮಾಡಿಕೊಂಡಾಕ್ಷಣ ಕಲಾವಿದರೆಂದು ಬೀಗುವ ಕಾಲ ಇದು.." ಸತ್ಯಕ್ಕೆ ದೂರವಾದ ಮಾತೇನೂ ಅಲ್ಲ. ಪ್ರತಿಭೆ, ಅರ್ಹತೆಗಳನ್ನ ಅಳೆಯಲು ಮಾನದಂಡವಾಗಬೇಕಿದ್ದ ಪರೀಕ್ಷೆಗಳು ಇಂದು ಎಷ್ಟರ ಮಟ್ಟಿಗೆ ತನ್ನಲ್ಲಿ ತಿರುಳನ್ನು ಉಳಿಸಿಕೊಂಡಿದೆ ಎಂಬುದೇ ಈಗಿನ ದೊಡ್ಡ ಪ್ರಶ್ನೆ ಮತ್ತು ಜೊತೆಗಿರುವ ಆತಂಕ. ಹಾಗಾದರೆ ತಪ್ಪು ಯಾರದ್ದು..? ವಿದ್ಯಾರ್ಥಿಗಳದ್ದೇ? ಪರೀಕ್ಷಕರದ್ದೇ? ನೃತ್ಯ ಶಿಕ್ಷಕರದ್ದೇ? ಪೋಷಕರದ್ದೇ? ಅಥವಾ ಪರೀಕ್ಷಾ ಮಂಡಳಿಯದ್ದೇ?

...ಒಟ್ಟಿನಲ್ಲಿ ಯಾರದ್ದೂ ಅಲ್ಲ... ಮತ್ತು ಎಲ್ಲರದ್ದೂ ಕೂಡಾ...

ಕೇರಳದ ಹಿರಿಯ ಸಂಗೀತ ಕಲಾವಿದೆಯೋರ್ವರು ಒಮ್ಮೆ ಹೇಳಿದ್ದು ನೆನಪಿದೆ. "ನಿಮ್ಮ ಕರ್ನಾಟಕದಲ್ಲಿ ಈ ಜೂನಿಯರ್, ಸೀನಿಯರ್, ವಿದ್ವತ್ ಪರೀಕ್ಷೆ ಅಂತ ಕಲೆಯನ್ನು ರಿಸ್ಟ್ರಿಕ್ಟ್ ಮಾಡ್ತಾರೆ. ಆ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಕಟ್ಟಿಸಿ, ಪಾಸ್ ಆದ್ರೆ ಅದು ಪ್ರತಿಷ್ಠೆಗೆ, ಸರ್ಟಿಫಿಕೇಟಿಗೆ, ಯಾವ್ದಾಕ್ಕಾದ್ರೂ ಅಪ್ಲಿಕೇಶನ್ ಹಾಕೋಕೆ ಅಥವಾ ಹೇಳ್ಕೊಂಡ್ ಬರೋಕೆ..ಅಷ್ಟೇ..! ಪ್ರತಿಭೆ, ಅರ್ಹತೆಗೆ ಎಷ್ಟು ಬೆಲೆಯಿದೆ..? ಪರೀಕ್ಷೆ ಪಾಸ್ ಮಾಡಿಕೊಂಡವ್ರಲ್ಲಿ ಎಷ್ಟೋ ಮಂದಿಗೆ ತಾಳ, ಮೇಳ, ಲಯದ ಪರಿಚಯವೇ ಸರಿಯಾಗಿ ಇಲ್ಲದಿರುವುದನ್ನು ಕಂಡಿದ್ದೇನೆ. ಸಿಲೆಬಸ್‌ಗೆ ಅಂತ ಕಲಿತು ಹೋಗಿ ಪರೀಕ್ಷೆ ಬರೆದಾಕ್ಷಣ



ಕಚೇರಿ, ಕಾರ್ಯಕ್ರಮ ಕೊಡಲು ಬಾರದೇ ಇರೋವ್ರೂ ಬೇಕಾದಷ್ಟಿದ್ದಾರೆ..!"

ನೃತ್ಯ ಸಂಗೀತದ ಗುರು ಪರಂಪರೆ, ಗುರುಕುಲ ಪದ್ಧತಿ ನಿಧಾನವಾಗಿ ಕಳಚಿಕೊಂಡು ಕೇವಲ ಸರ್ಟಿಫಿಕೇಟಿಗೆ ಮೀಸಲಾಗುವ ಸಂದರ್ಭಕ್ಕೆ ಮೇಲ್ಕಂಡ ಮಾತುಗಳೇ ಉದಾಹರಣೆ..

ಹಾಗಂದ ಮಾತ್ರಕ್ಕೆ ಎಲ್ಲಾ ವಿದ್ಯಾರ್ಥಿ, ಗುರು, ಪೋಷಕರು, ಗುರು, ಪರೀಕ್ಷಕರದ್ದೆಲ್ಲಾ ಇದೇ ಪಾಡೇ?...

ಇಲ್ಲ... ಈ ಪರಿಸ್ಥಿತಿಯ ವ್ಯಂಗ್ಯಕ್ಕೆ ಅಪವಾದವೆನಿಸುವ ಶಿಷ್ಯರು, ಗುರು, ಪರೀಕ್ಷಕ, ಪೋಷಕ ವೃಂದವಿದೆಯಾದರೂ, ಅವರ ಸಂಖ್ಯೆ ಬಹಳ ವಿರಳ. ಆದರೆ ಕೊಳೆತ ಮಾವಿನ ಹಣ್ಣಿನೊಂದಿಗೆ ಬುಟ್ಟಿಯಲ್ಲಿರುವ ಮಾವಿನ ಹಣ್ಣುಗಳು ಕೊಳೆಯುವ ಸಂಭವಗಳು ಇರುವ ಹಾಗಾಗಿದೆ ಪರಿಸ್ಥಿತಿ...!

ನಮ್ಮನ್ನು ನಾವು ಕೇಳಿಕೊಳ್ಳಬೇಕಾಗಿದೆ...ಪ್ರತಿಭೆಯನ್ನು ಅಳೆಯಲು ಪರೀಕ್ಷೆಗಳು ಅವಶ್ಯವೇ? ಹೀಗೆಯೇ ಮುಂದುವರಿದರೆ ಸಂಗೀತ ನೃತ್ಯಾದಿ ಕಲೆಗಳು ತಮ್ಮ ಭವ್ಯ ಅಸ್ತಿತ್ವವನ್ನು ಉಳಿಸಿಕೊಂಡಾವೇ? ಅಥವಾ ಉಳಿಸಿಕೊಳ್ಳುವ ಭರದಲ್ಲಿ ಕೈಗೊಳ್ಳುವ ಪರೀಕ್ಷೆಯಂತಹ ಪ್ರಯತ್ನಗಳು ಪ್ರಬುದ್ಧ ಕಲೆ ಮತ್ತು ಕಲಾವಿದರನ್ನೇ ಮರೆಸಿ ಅವಮಾನ ಎಸಗಿಯಾವೇ?

ನಮಗೆ ಬೇಕಿರುವುದಾದರೂ ಏನು? ಪ್ರತಿಭೆ, ಅರ್ಹತೆಗಳೇ? ಅಥವಾ ಪರೀಕ್ಷೆಗಳನ್ನು ಪಾಸು ಮಾಡಿಕೊಂಡ ಪಟ್ಟವೇ?



# ದರ್ಶನ ಭ್ರಮರಿ



**ನಾಟ್ಯಾಚಾರ್ಯ ಮುರಳೀಧರರಾವ್ ಪಂದನಲ್ಲೂರು ಭರತನಾಟ್ಯ ಶೈಲಿಯ ಹಿರಿಯ ಗುರು. ೧೯೨೪ ರಲ್ಲಿ ಕಾಸರಗೋಡಿನಲ್ಲಿ ಜನಿಸಿದ ಇವರು, ೧೯೫೮ರಲ್ಲಿ ಕಥಕ್ಕಳಿ ನೃತ್ಯ ಕಲಿತರಾದರೂ ಕ್ರಮೇಣ ಅವರ ಆಸಕ್ತಿ ಚಾಚಿಕೊಂಡದ್ದು ಭರತನಾಟ್ಯದೆಡೆಗೆ. ಪಂದನಲ್ಲೂರು ಚೊಕ್ಕಲಿಂಗಮ್, ಎಂ.ಆರ್. ರಾಜರತ್ನಂ ಪಿಳ್ಳೈ ಅವರಲ್ಲಿ ಅಧ್ಯಯನ. ಹಾಗಾಗಿ ಅವರು ಜ್ಞಾನವೃದ್ಧರೂ ಹೌದು, ವಯೋವೃದ್ಧರೂ ಹೌದು. ಕಲೆಯನ್ನೇ ವರಿಸಿದ ರಾಯರ ವಿದ್ವತ್ತು, ನಿರಂತರ ಶ್ರದ್ಧೆಯ ಫಲವಾಗಿ ರೂಪುಗೊಂಡ ಗ್ರಂಥ ನೃತ್ಯಲೋಕ. ಪ್ರಸ್ತುತ ತಮ್ಮ ಜೀವನದ ಇಳಿಸಂಜೆಯಲ್ಲೂ ಹಲವು ಶಿಷ್ಯರಿಗೆ ಮಾರ್ಗದರ್ಶನವನ್ನೀಯುತ್ತಾ ಮಂಗಳೂರಿನಲ್ಲಿ ನೆಲೆಸಿರುವ ಇವರು ದರ್ಶನ ಭ್ರಮರಿಯ ಅತಿಥಿ...**

**1. ಭರತನಾಟ್ಯವನ್ನು ಪ್ರೇಕ್ಷಕರು ನೋಡುವ ದೃಷ್ಟಿಯಲ್ಲಿ ಏನು ಬದಲಾವಣೆ ಕಂಡಿದ್ದೀರಾ? ಅಂತಹ ಬದಲಾವಣೆಗಳಿಗೆ ಕಾರಣಗಳೇನಿರಬಹುದು?**

ಈಗಿನ ದಿನಗಳಲ್ಲಿ ಪ್ರತಿಯೊಬ್ಬರೂ ಭರತನಾಟ್ಯ ಮಾಡುವವರೇ! ಇದರಿಂದಾಗಿ ಯಾವುದು ಶುದ್ಧ ನಾಟ್ಯ ಮತ್ತು ಯಾವುದು ಅಲ್ಲ ಎಂದೇ ತಿಳಿಯದ ಸ್ಥಿತಿ. ಜೊತೆಗೆ ಜನರ ಮನಸ್ಥಿತಿಯೂ ಬದಲಾಗುತ್ತ ಸಾಗಿದೆ. ಆದರೂ ಪ್ರೇಕ್ಷಕರು ಪ್ರಬುದ್ಧರು ಎಂಬುದನ್ನು ಮರೆಯಕೂಡದು. ಮುಖ್ಯವಾದದ್ದನ್ನಷ್ಟೇ ಅವರು ತೆಗೆದುಕೊಳ್ಳುತ್ತಾರೆ. ಆದರೆ ಒಮ್ಮೊಮ್ಮೆ ಕೇವಲ ಕಲಾವಿದರ ಸೌಂದರ್ಯ, ಸೌಷ್ಟವಗಳನ್ನು ನೋಡಿ ಭರತನಾಟ್ಯದ ಸೌಂದರ್ಯವನ್ನು ಅಳೆಯುವವರೂ, ತೀರ್ಪು ಕೊಡುವವರೂ ಇದ್ದಾರೆ.



ಉದಾ: ಬಹುಪಾಲು ರಂಗಪ್ರವೇಶಗಳ ಯಶಸ್ಸು ಇವುಗಳ ಮೇಲೆಯೇ ನಿರ್ಣಯವಾಗುತ್ತಿರುವುದು. ಹಾಗಾಗಿ ನೃತ್ಯ ಕೇವಲ ಚಪ್ಪಾಳೆಗಳಿಗೆ ಸೀಮಿತಗೊಳ್ಳುವುದೂ ಇದೆ. ಒಳ್ಳೆಯ ನೃತ್ಯಕ್ಕೂ ಚಪ್ಪಾಳೆ, ಕೆಟ್ಟದಾಗಿ ಮಾಡಿದರೂ ಚಪ್ಪಾಳೆ. ಒಟ್ಟಿನಲ್ಲಿ ಬೆಳವಣಿಗೆಗಳು ಎತ್ತ ಸಾಗುತ್ತಿದೆ ಎನ್ನುವುದೇ ನಿರ್ದಿಷ್ಟವಾಗುತ್ತಿಲ್ಲ.

**೨.ಇದರ ಹಿಂದೆ ಇಂದಿನ ಕಲಾವಿದರ ನ್ಯೂನತೆಗಳ ಪಾತ್ರವೆಷ್ಟು?**

ಇಂದಿನ ಎಷ್ಟೋ ಕಲಾವಿದರಲ್ಲಿ ನೈಪುಣ್ಯತೆಯಿಲ್ಲ...ಸ್ವಂತಿಕೆ, ಸೃಜನಶೀಲತೆಗಳಿಲ್ಲ. ಅವರು ಮಾಡುತ್ತಿರುವುದು ಕೇವಲ ಅನುಕರಣೆಯನ್ನಷ್ಟೇ! ಗುರುಗಳು ಹೇಳಿಕೊಟ್ಟದ್ದನ್ನು ಗಿಣಿಪಾಠ ಒಪ್ಪಿಸುವವರೇ ಹೆಚ್ಚು. ಇದು ಒಳ್ಳೆಯ ಲಕ್ಷಣವಲ್ಲ. ಯಾವುದೇ ಕಲಾವಿದ ಸ್ವಂತಿಕೆ, ಸೃಜನಶೀಲತೆಯಿಲ್ಲದೆ ತನ್ನ ಕಲೆಯಲ್ಲಿ ಶಾಶ್ವತವಾಗಿ ಮುಂದುವರಿಯಲಾರನು.

ಇಂದಿನವರು ಕೀರ್ತನೆ ತಂದು ವರ್ಣದ ತರಹ ಮಾಡಿದರೆ ಸೃಜನಶೀಲತೆಯೆಂದುಕೊಳ್ಳುತ್ತಾರೆ. ಇದು ಎಷ್ಟರ ಮಟ್ಟಿಗೆ ಶಾಸ್ತ್ರಸಮ್ಮತ?

ಜೊತೆಗೆ ಭರತನಾಟ್ಯಕ್ಕೆ ಇಂದು ಎಲ್ಲರೂ ಸಾಹಿತ್ಯ ಬರೆಯುವವರೇ! ಹಿಂದಿನ ವಾಗ್ಗೇಯಕಾರರ ಅಕ್ಷರಗಳಲ್ಲೇ ಸಂಗೀತವೂ ಸೇರಿಕೊಳ್ಳುತ್ತಿತ್ತು. ಅವರಲ್ಲಿ ವಾಕ್+ಗೇಯತೆ ಶಕ್ತಿ ಇತ್ತು. ಆದರೆ ಇಂದಿನವರ ಸಾಹಿತ್ಯಕ್ಕೆ ಬಲವಂತವಾಗಿ ಸಂಗೀತ ಅಳವಡಿಸಬೇಕಷ್ಟೇ!

ಹಾಗಾಗಿ ಮನಸ್ಸು ಪಕ್ವಗೊಳ್ಳಬೇಕಿದೆ. ಆಗಲೇ ಕಲಾವಿದೆಯಲ್ಲಿ ಹೊಸತನದ ಅಭಿವ್ಯಕ್ತಿಗೆ ಒಂದು ಅರ್ಥ ಬರುತ್ತದೆ.

**೩. ಭರತನಾಟ್ಯದ ಪ್ರಾಚೀನತೆಯ, ಹುಟ್ಟು, ಆಕರದ ಕುರಿತಾಗಿನ ಜಿಜ್ಞಾಸೆಗಳ ಬಗ್ಗೆ ನಿಮ್ಮ ಅಭಿಪ್ರಾಯ?**

ಭರತನಾಟ್ಯಕ್ಕೆ 3000 ವರ್ಷದಷ್ಟು ಹಿಂದಿನ ಇತಿಹಾಸವಿದೆಯೆನ್ನುವುದು ಸುಳ್ಳು. ಒಟ್ಟಾರೆ ಎಲ್ಲಾ ಶಾಸ್ತ್ರೀಯ ನೃತ್ಯಕ್ಕೆ ಅಷ್ಟು ಹಿರಿಯದಾದ ಇತಿಹಾಸವಿರಬಹುದಷ್ಟೇ!

ಆದರೆ ಭರತನಾಟ್ಯದ ವೈಭವವನ್ನು ವೈಭವೀಕರಿಸುತ್ತಾರೆ. ಭರತನಾಟ್ಯ ಕೇವಲ 300 ವರ್ಷಗಳಷ್ಟೇ ಹಿಂದಿನದು. ಅದಕ್ಕೆ ಮೊದಲಿದ್ದ ಹೆಸರು ದಾಸೀ ಆಟ್ಟಂ ಎಂದು.. ಈ ನೃತ್ಯಪ್ರಕಾರಕ್ಕಿದ್ದ ಕಳಂಕ ತೊಡೆಯಲು ಹಿರಿಯರು ಹೆಸರಿಸಿದ ಪದ ಭರತನಾಟ್ಯ.

ಭರತನಾಟ್ಯದ ಮೂಲ ಪ್ರವರ್ತಕನೆನಿಸಿಕೊಂಡ ಭರತಮುನಿ ಭರತನಾಟ್ಯವೆಂದುಕೊಂಡಿರುವ ಯಾವುದನ್ನೂ ಬರೆದವನಲ್ಲ. ಅವನು ಬರೆದದ್ದು ನಾಟಕ ಪ್ರಧಾನವಾದ ಸಂಗತಿಗಳನ್ನು. ಭಾರತದ ಎಲ್ಲಾ ಬಗೆಯ ನೃತ್ಯಕ್ಕೂ ಅದೇ ಮೂಲ. ನಂತರ ಆಯಾಯ ನೃತ್ಯಶೈಲಿಗಳಿಗನುಗುಣವಾಗಿ ಅದರದ್ದೇ ಆದ ಪ್ರಧಾನ ಗ್ರಂಥಗಳು ಬರೆಯಲ್ಪಟ್ಟವು. ಅದು ಭರತನಾಟ್ಯಕ್ಕಿಂತ ತೀರಾ ವಿಭಿನ್ನ. ಆದರೆ ಭರತನಾಟ್ಯ ಹೆಚ್ಚಾಗಿ ಅವಲಂಬಿಸುವುದು ಭರತನ ನಾಟ್ಯಶಾಸ್ತ್ರಕ್ಕಿಂತಲೂ ಹೆಚ್ಚಾಗಿ ನಂದಿಕೇಶ್ವರನ ಅಭಿನಯ ದರ್ಪಣವನ್ನು. ಅದೇ ಯಕ್ಷಗಾನವಾದರೆ ಅದಕ್ಕೆ ನಾಟ್ಯಶಾಸ್ತ್ರ ಆಕರ.

ಭರತನಾಟ್ಯದ ಹುಟ್ಟೂ ಕೂಡಾ ಕರ್ನಾಟಕದ್ದಲ್ಲ. ಅದು ತಮಿಳ್ನಾಡಿನಿಂದ ಬಂದದ್ದು. ಆದರೆ ನಮ್ಮದೆಂಬಂತೆ ಸ್ವೀಕರಿಸಿದ್ದೇವೆ. ತಮಿಳ್ನಾಡಿನಿಂದ ಆಮದಾಗಿದೆ ಎನ್ನುವ ಭರತನಾಟ್ಯಕ್ಕೆ ಇಂದಿಗೂ ಬಳಸುವ ಮುಖ್ಯ ಕೃತಿಗಳೇ ಸಾಕ್ಷಿ ಮತ್ತು ಅನಾದಿ ಕಾಲದ ಗುರುಕುಲ ಪದ್ಧತಿ ಅಲ್ಲಿ ಇಂದಿಗೂ ಉಳಿದಿದೆ.

**೪.ಹಾಗಾದರೆ ಕರ್ನಾಟಕದ ಮೂಲಕಲೆ ಯಾವುದು ಎಂಬುದು ನಿಮ್ಮ ಅನಿಸಿಕೆ?**

ದೀರ್ಘವಾಗಿ ವಿವೇಚಿಸಿದರೆ ಕರ್ನಾಟಕದ ದೇಸೀ ಕಲೆ, ಇಲ್ಲಿನ ಜನಪದ–ಜಾನಪದ–ಶಾಸ್ತ್ರೀಯತೆಯನ್ನು, ಸಾಹಿತ್ಯ, ನಡೆ–ನಾಟ್ಯ, ಕೃತಿಯನ್ನು ಮೈಗೂಡಿಸಿಕೊಂಡ ಕಲೆ ಯಕ್ಷಗಾನ.

ಹಾಗೆ ನೋಡಿದರೆ ಯಕ್ಷಗಾನದ ಮೂಲ ಸ್ವರೂಪ ಸ್ವಲ್ಪ ಮಟ್ಟಿಗಾದರೂ ಉಳಿದಿದೆ ಮತ್ತು ಅದರ ಉಳಿಯುವಿಕೆಯ ದಿಸೆಯಲ್ಲೂ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಆದರೆ ಭರತನಾಟ್ಯ ಕಾಲಾಂತರಗಳಲ್ಲಿ ಸಾಕಷ್ಟು ಬದಲಾವಣೆಗೊಳಪಟ್ಟರೂ



ಕರ್ನಾಟಕದಲ್ಲಿ ಮೂಲ ಸಂಸ್ಕಾರವನ್ನು ಕಳೆದುಕೊಳ್ಳುತ್ತಲೇ ಸಾಗುತ್ತಿದೆ.

ಅಷ್ಟಕ್ಕೂ ಭರತನಾಟ್ಯವನ್ನೂ ಸೇರಿಸಿದಂತೆ, ಯಕ್ಷಗಾನದ ಆಡು ಮಾತಿನ ವ್ಯಾಕರಣವನ್ನೇ ಬದಲಾಯಿಸಬೇಕಾಗಿದೆ. ಉದಾ: ಲಾಗ ಹೊಡೆಯುವುದು ಎನ್ನುವುದು. ಅದರ ನಿಜವಾದ ಶಬ್ದಾರ್ಥ 'ಭ್ರಮರಿ' ಎಂದು. ಅದರ ಅರ್ಥ ತಿರುಗು. ಆದರೆ ಅದನ್ನೇ ಲಾಗ ಎಂದಾಗ ಹಾರು ಎಂದಾಗುತ್ತದೆ. ಇದರಿಂದ ಧ್ವನಿ, ಅರ್ಥ ವ್ಯತ್ಯಾಸವಾಗುತ್ತದೆ.

**೫.ಭರತನಾಟ್ಯವನ್ನು ಕಲಿಯಲು ಹುಡುಗರೂ ಬಹಳಷ್ಟು ಆಸಕ್ತಿ ತೋರುತ್ತಿದ್ದಾರೆ. ಅವರ ಕಲಿಕಾ ಪ್ರಕ್ರಿಯೆ ಹೇಗಿದ್ದರೆ ಚೆನ್ನ?**

ಭರತನಾಟ್ಯವೆಂಬುದು ಮೂಲತಃ ದಾಸೀಆಟ್ಟಂ ಎಂದು ಕರೆಸಿಕೊಳ್ಳುವ ನೃತ್ಯಶೈಲಿ. ಆ ದಾಸೀಆಟ್ಟಂ ಪ್ರೇಮ, ಸ್ತ್ರೀ ಸಹಜ ಭಾವನೆಗಳ ಸಮ್ಮಿಲನದ ಸುಂದರ ರೂಪ. ಹಾಗಾಗಿ ಅದನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವುದು ಹುಡುಗಿಯರಿಂದಷ್ಟೇ ಸಾಧ್ಯ.

ಹಾಗೆಂದ ಮಾತ್ರಕ್ಕೆ ಹುಡುಗರಿಗೆ ಭರತನಾಟ್ಯ ಶೋಭಿಸುವುದಿಲ್ಲವೆಂದು ಅರ್ಥವಲ್ಲ. ನೃತ್ಯದಲ್ಲಿ ತಾಂಡವ ಅಂಶ ಹೇರಳವಾಗಿದ್ದರೆ ಮಾತ್ರ ಹುಡುಗರಿಗೆ ಚೆನ್ನ. ಜೊತೆಗೆ ಭರತನಾಟ್ಯದಲ್ಲಿ ಕಂಡುಬರುವ ವರ್ಣ, ಪದ, ಜಾವಳಿ ಮುಂತಾದ ನೃತ್ಯ ಪ್ರಕಾರಗಳಲ್ಲೂ ನಾಯಕೀ ಭಾವಕ್ಕೆ, ಅವಳ ವಿರಹ–ಪ್ರೇಮಕ್ಕೆ ಹೆಚ್ಚು ಅವಕಾಶಗಳಿರುತ್ತವೆಯೇ ವಿನಃ ನಾಯಕನು ನಾಯಕಿಯನ್ನು ಹುಡುಕಿಕೊಂಡು ಹೋಗುವಂತಹ ಸಂದರ್ಭಗಳು ತೀರಾ ವಿರಳ. ಹಾಗಾಗಿ ಅಂತಹ ಸಂದರ್ಭಗಳನ್ನು ಹುಡುಗರು ವೇದಿಕೆಯಲ್ಲಿ ವ್ಯಕ್ತಪಡಿಸಹೊರಟರೆ ಆಭಾಸವೆನಿಸಿಕೊಳ್ಳುತ್ತದೆ.

...ಮುಂದಿನ ತಿಂಗಳ **ದರ್ಶನ ಭ್ರಮರಿ**ಗೆ ಅತಿಥಿಗಳನ್ನು ನೀವೂ ಪರಿಚಯಿಸಿ..ಜ್ಞಾನವೃದ್ಧರ ಪರಿಚಯ,ಅವರ ಅನುಭವದ ನುಡಿಗಳು ನೃತ್ಯ ಕ್ಷೇತ್ರದ ಚಿಂತನೆಗೆ ಚಾವಡಿಯಾಬೇಕು..ಅವರನ್ನು ದರ್ಶನ ಭ್ರಮರಿಯ ಅಂಗಣಕ್ಕೆ ಕರೆತನ್ನಿ, ಚರ್ಚೆಗಳು ಚೆಂದಗೆ ಮೂಡಿ ಬರಲಿ...

# ನರ್ತನ ಭ್ರಮರಿ

## ಶಬ್ದ

**ವೈಷ್ಣವಿ .ಎನ್**

ಜತಿಸ್ವರವಾದ ನಂತರ ಕ್ಲಿಷ್ಟವಾದ ವರ್ಣವನ್ನು ನರ್ತಿಸುವ ಮೊದಲು, ಕಲಾವಿದೆಯು ತನ್ನ ಅಭಿನಯ ಚಾತುರ್ಯ ಪ್ರಸ್ತುತಪಡಿಸಲು ಅನುವು ಮಾಡಿಕೊಡುವ ಮೂರನೇಯ ಅಂಗವೇ ಶಬ್ದಂ. ಇದು ಮೃದಂಗದ ನುಡಿಕಾರಗಳಿಗೆ ಹೆಣೆದ ಜತಿಗಳು ಮತ್ತು ಸಾಹಿತ್ಯಗಳ ಸಮ್ಮಿಶ್ರಣದಿಂದ ಕೂಡಿದ್ದು, ಜತಿಗಳಿರುವಲ್ಲಿ ನೃತ್ತವೂ, ವರ್ಣನಾತ್ಮಕವಾದ ಸಾಹಿತ್ಯದಲ್ಲಿ ಅಭಿನಯವೂ ಕೂಡಿರುತ್ತದೆ. ಮೃದಂಗದ ನಾದದಂತೆ ಸಾಹಿತ್ಯವೂ ಪ್ರಾಸ-ಅನುಪ್ರಾಸದಿಂದ ಕೂಡಿದ್ದು ಆಕರ್ಷಕವಾಗಿರುತ್ತದೆ.

ಪುರಾಣಗಳಲ್ಲಿ ತಿಳಿಸಿರುವ ಕಥೆಗಳಿಂದ ಆರಿಸಿದುದೇ ಶಬ್ದವೆಂಬ ನೃತ್ಯ. ಇದರಲ್ಲಿ ಅಭಿನಯಿಸುವ ಸಾಹಿತ್ಯವು ಸಂಗೀತದ ನೆರವಲ್ ಪದ್ಧತಿಯನ್ನು ಅನುಸರಿಸುತ್ತದೆ. ಅಲರಿಪು ಸರಳವಾದ ಚಲನೆಯಿಂದ ಕೂಡಿದ ತಾಳ-ಲಯ ಆಶ್ರಯವಿರುವ ನೃತ್ತ. ಜತಿಸ್ವರದಲ್ಲಿ ರಾಗ ಮತ್ತು ತಾಳಲಯಗಳು ಮಿಳಿತವಾಗಿದ್ದರೆ, ಶಬ್ದದಲ್ಲಿ ಸಾಹಿತ್ಯಕ್ಕೆ ಅನುಗುಣವಾದ ಅಭಿನಯ, ಹೆಸರಿಗಷ್ಟೇ ಚಿಕ್ಕದಾದ ಜತಿಗಳು ಇರುತ್ತವೆ.

ಅಭಿನಯವನ್ನು ಪ್ರಪ್ರಥಮವಾಗಿ ನರ್ತನಕ್ಕೆ ಸೇರಿಸಿದ ನೃತ್ಯಬಂಧವೇ ಶಬ್ದ. ಚಿಕ್ಕ ಚಿಕ್ಕ ಶೊಲ್ಕಟ್ಟುಗಳು, ನಾಲ್ಕು ಚರಣಗಳು, ಪ್ರತೀ ಚರಣದ ಅಂತ್ಯಭಾಗಕ್ಕೆ ಸಂಚಾರೀ ಭಾವಗಳು, ಒಂದೊಂದು ನುಡಿಯಲ್ಲಿ ಬರುವ ಕೊನೆಯ ಸಾಲನ್ನು ಮೂರು ಮೂರು ಬಾರಿ ಹಾಡಿ ನರ್ತಿಸುವುದು ಇದರ ಗುಣಗಳು. ಈಚೆಗೆ ಒಂದೊಂದು ಸಾಲುಗಳನ್ನು ಒಂದೊಂದು ರಾಗದಲ್ಲಿ ಹಾಡುವ ರಾಗಮಾಲಿಕೆ ಪದ್ಧತಿ ಜನರಂಜನೆಯ ದೃಷ್ಟಿಯಿಂದ ಅಗತ್ಯವೆನಿಸಿದೆ. ತಾಳವನ್ನು ಅಭಿನಯಕ್ಕೆ ಅನುಕೂಲವಾಗಿ ಹೊಂದಿಸಲು ಮಿಶ್ರಛಾಪು ತಾಳ ಬಳಸುತ್ತಾರೆ.



ಜತಿಗಳನ್ನು ಕೇಳುವಾಗ ಹಸ್ತ ಪಾದ ಚಲನೆಗಳು ನರ್ತಕಿಯ ಶರೀರದ ಚೇಷ್ಟೆಗಳೆನಿಸಿಕೊಳ್ಳಬಹುದು. ಆದರೆ ಸಾಹಿತ್ಯಕ್ಕೆ ಅಭಿನಯದಲ್ಲಿ ಮನಸ್ಸಿನ ಭಾವಗಳನ್ನು ಮುಟ್ಟಿಸುವುದು ಮುಖ್ಯವಾಗುತ್ತದೆ. ಈ ಮೂಲಕ ಸಂಯುತ ಮತ್ತು ಅಸಂಯುತ ಹಸ್ತಗಳ ಪರಿಚಯವಾಗುವುದರೊಂದಿಗೆ ಭಾವಾಭಿನಯದ ಆರಂಭವೂ ಆಗುತ್ತದೆ. ಸಾಹಿತ್ಯವನ್ನು ರಚಿಸಿದ ಕವಿಯ ಇಂಗಿತಕ್ಕೂ, ಆ ಭಾವಕ್ಕೆ ತಕ್ಕ ಮುದ್ರೆಗೂ ಒಂದೊಕ್ಕೊಂದು ಪೋಷಕವಾಗಿ ಮನಸ್ಸಿನ ಪ್ರಬುದ್ಧತೆಯ ಹಂತಕ್ಕೇರುವುದು ಶಬ್ದ ಎಂಬ ಉದ್ದೇಶವನ್ನು ವಿದ್ವಾಂಸರು ಕಟ್ಟಿಕೊಡುತ್ತಾರೆ. ಶರಣಾಗತಿಯ ಅಂಶ ಇಲ್ಲಿ ವಿಶೇಷವಾಗಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

ಮೊದಲು ಶಬ್ದಗಳಿಗೆ ಯಶೋಗೀತ ಮತ್ತು ವರ್ಣನಗೀತವೆಂಬ ಹೆಸರಿದ್ದಿತು. 1400ರಲ್ಲಿ ದೇವೇಂದ್ರ ತನ್ನ ಸಂಗೀತ ಮುಕ್ತಾವಳಿಯಲ್ಲಿ ದೇಶೀ ಶೈಲಿಯ ಶಬ್ದನೃತ್ತ, ಶಬ್ದ ಜಾಲಿ ಮತ್ತು ಸೂಡ ಶಬ್ದಗಳನ್ನು ತಿಳಿಸಿದ್ದಾನೆ. 1600– 1630 ರಲ್ಲಿ ರಘುನಾಯಕ ಮತ್ತು 1633–1673 ರಲ್ಲಿ ವಿಜಯರಾಘವ ನಾಯಕನ ಕಾಲದಲ್ಲಿ ಶಬ್ದಪ್ರಬಂಧ ಹೆಚ್ಚಾಗಿ ಬಳಕೆಯಲ್ಲಿತ್ತು. ಆಗ ಶಬ್ದಾಭಿನಯದಲ್ಲಿ ನಿಪುಣೆಯರಾದ ಚಂಪಕವಲ್ಲಿ ಮತ್ತು ಚಂದ್ರಲೇಖಾ ಎಂಬಿಬ್ಬರು ಕಲಾವಿದೆಯರಿಗೆ ಶಬ್ದಚೂಡಾಮಣಿ ಮತ್ತು ಶಬ್ದ ಚಿಂತಾಮಣಿ ಎಂಬ ಬಿರುದುಗಳೂ ಇತ್ತು.

ಶಬ್ದದ ಸಾಹಿತ್ಯವು ನಾಯಿಕೆಯ ವಿರಹವೇದನೆ, ನಾಯಕನ ಗುಣಕಥನ, ಭಗವಂತನ ನಿಂದಾ-ಸ್ತುತಿ, ಆಶ್ರಯದಾತನ ಗುಣಗಾನ, ಕೋಪ-ಛಲವುಳ್ಳ ವಾಕ್ಯಗಳಿಂದ ಕೂಡಿದ ನಾನಾ ಭಾವನೆಗಳನ್ನು ವ್ಯಕ್ತಪಡಿಸುವ ಸನ್ನಿವೇಶ... ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ಪೂರಕವಾಗಿ ಕಥಾವಸ್ತುವೊಂದರ ಸಂಚಾರಿ ಭಾವಗಳು ಅಭಿನಯವನ್ನು, ಸನ್ನಿವೇಶಗಳನ್ನೂ ಪುಷ್ಟೀಕರಿಸುತ್ತವೆ. ಕಡೆಯ ಸಾಲಿನ ಸಾಹಿತ್ಯದಲ್ಲಿ ಮುಸಲ್ಮಾನ, ಮರಾಠಾ ದೊರೆಗಳನ್ನು ಮೆಚ್ಚಿಸಲು ಇದ್ದ ಸಲಾಮುರೇ ಅಥವಾ ಈಗಿನವರು ಬದಲಾಯಿಸಿಕೊಂಡತೆ ನಮೋಸ್ತುತೇ, ಪ್ರಣಾಮುರೇ

ಎಂಬ ನುಡಿಗಟ್ಟುಗಳೂ ರೂಢಿಯಲ್ಲಿವೆ. ಸಂಗೀತಗಾರರಿಗೆ ತಮ್ಮ ಪಾಂಡಿತ್ಯ ಪ್ರದರ್ಶಿಸುವುದರ ಜೊತೆಗೆ ಅಪೂರ್ವ ಸೌಂದರ್ಯಾನುಭವದ ದೃಷ್ಟಿ ಇದರಲ್ಲಿದೆ.

**ಶಬ್ಧ –ಎಂದರೆ ಸಾಮಾನ್ಯ ಅರ್ಥದಲ್ಲಿ ಕೂಗು, ಗಲಾಟೆ, ಸದ್ದು-ಗದ್ದಲ ಇತ್ಯಾದಿ. ಹಾಗಾದರೆ ನೃತ್ಯಬಂಧವೊಂದಕ್ಕೆ ಶಬ್ದ ಎಂದು ಹೆಸರಿಡಲು ಕಾರಣವೇನು?**

ಶಬ್ದ ಎಂಬ ಪದದ ವಿವಿಧ ಸಂದರ್ಭಗಳ ಅರ್ಥವು ಧ್ವನಿ, ಅಕ್ಷರ, ಕೀರ್ತಿ, ಗಾನ, ವಾಕ್ಯ, ಆಕಾಶ, ಶಾಸ್ತ್ರದಲ್ಲಿ ಹೇಳುವಂತ ಶಬ್ದ ಎಂಬ ಏಳು ಪ್ರಕಾರಗಳಲ್ಲಿವೆ ಎಂದು ವಿ. ಎಸ್. ಕೌಶಿಕ್ ಹೇಳುತ್ತಾರೆ.

**‘ ಶಬ್ದೋಕ್ಷರೇ ಯಶೋಗೀತೇ**
**ವ್ಯೋಮ ವಾಕ್ಯ ಧ್ವನಿಷ್ವಪಿ’**
**-ನಾನಾರ್ಥ ರತ್ನಮಾಲೆ**

1. ಉಪನಿಷತ್ತಿನ ತದ್ದ ತದ್ವನ ಎಂಬ ಶಬ್ದವನ್ನು ಮತ್ತು ನ್ಯಾಯ ಶಾಸ್ತ್ರೋಕ್ತ ಶಬ್ದಾರ್ಥವನ್ನು ಸಾರ್ಥಕಪಡಿಸಿರುವುದು
2. ಶ್ರೀಕರ, ಸುಗುಣಾಕರ- ಇತ್ಯಾದಿ ಭಗವಂತನ ಕೀರ್ತಿಯನ್ನು ಹೇಳುವುದು
3. ನಾಯಿಕೆಯು ತನ್ನ ನಿರ್ದಿಷ್ಟ ಮನೋಭಾವ-ಭಂಗಿಯನ್ನು ಧ್ವನಿಸಿರುವುದು.
4. ಕಾಂಭೋಜಿ, ಕಲ್ಯಾಣಿ- ಇತ್ಯಾದಿ ರಾಗದಲ್ಲಿ ಗಾನ ಮಾಡುವುದು
೫. ಒಂದೊಂದು ಸಾಲಿನಲ್ಲಿಯೂ ಒಂದೊಂದು ವಾಕ್ಯಗಳು ತಕ್ಕ ಸನ್ನಿವೇಶಗಳೊಡನೆ ಪೂರ್ಣಗೊಳ್ಳುವುದು
6. ಅಕ್ಷರಗಳ ಪ್ರತ್ಯೇಕತಾ ಸೌಕರ್ಯ

ಹೀಗೆ ಆರು ಅಂಶಗಳು ಸೇರಿರುವ ಕಾರಣ ಶಬ್ದ ಎಂಬ ಹೆಸರು ಅನ್ವರ್ಥವಾಗಿದೆ ಎಂದು ವಿದ್ವಾಂಸರು ಸಿದ್ಧಾಂತಿಸಿದ್ದಾರೆ.

ಶಬ್ದವೇ ಆಕಾಶದ ಗುಣವಾಗಿರುವುದರಿಂದ ಆಕಾಶವೆಂಬ



ಅರ್ಥವೊಂದನ್ನು ಬಿಟ್ಟು, ಉಳಿದ ಆರು ಅರ್ಥಗಳೂ ಈ ನೃತ್ಯದಲ್ಲಿ ಸಾರ್ಥಕತೆ ಪಡೆಯುತ್ತವೆ. ಆದ್ದರಿಂದ ಸಾಂಪ್ರದಾಯಿಕರು ಈ ನೃತ್ಯಕ್ಕೆ ಶಬ್ದ ಎಂಬ ಹೆಸರನ್ನಿರಿಸಿರುವುದು ಯಾದೃಚ್ಛಿಕವಲ್ಲ;
ಪೂರ್ವಾಲೋಚನೆಯಿರುವಂತದ್ದು ಎನ್ನುತ್ತಾರೆ ವಿದ್ವಾಂಸರು.

ಆದರೆ ಕೆಲವು ವಿದ್ವಾಂಸರು ಇದನ್ನು ಬೇರೆಯದೇ ರೀತಿಯಲ್ಲಿ ಅರ್ಥೈಸುತ್ತಾರೆ. ಸಂಸ್ಕೃತದಲ್ಲಿ ಶಬ್ದ ಎಂದರೆ ಪ್ರೌಢ ಪ್ರಾಚೀನ ಶೈಲಿಯಲ್ಲಿ ಗುಣಗಾನ ಮಾಡುವ ಕ್ರಮ. ದೇವಾಲಯದ ದೇವತೆ, ಊರಿನ ಹಿರಿಯ ವೀರ, ರಾಜ ಮೆರವಣಿಗೆಯಲ್ಲಿ ಬರುತಿರುವಾಗ ಅಥವಾ ಸಭೆಯಲ್ಲಿರುವಾಗ ವಂಧಿಮಾಗಧರು ಅವರ ಗುಣವಿಶೇಷಗಳನ್ನು ಶ್ಲಾಘಿಸುವ ಸ್ತುತಿ. ದಿನ ಕಳೆದಂತೆ ಇಂಥ ಸ್ತುತಿಗಳು ಕಾವ್ಯಮಯವಾದವು. ಕೊನೆಗೆ ಪ್ರೇಮ ಪ್ರಸಂಗಗಳನ್ನು ಕಲ್ಪಿಸಿಕೊಂಡು ವಿವರಿಸುವ ಮಟ್ಟಕ್ಕೆ ಬಂತು. ನಾಯಕನಿಗಾಗಲೀ, ರಾಜನಿಗಾಗಲೀ, ದೇವರಿಗಾಗಲೀ ಎಲ್ಲರೂ ಶರಣಾಗುವಂತೆ ಪ್ರಣಾಮ ಶಬ್ದಗಳು ಸೇರಿಕೊಂಡವು.

ಆದರೆ ಈ ವಾದಕ್ಕೆ ಮತ್ತೊಂದು ಪ್ರತಿವಾದವಿದೆ. ಅವರ ಪ್ರಕಾರ ಶಬ್ದದ ನಟ್ಟುವಾಂಗ ಮಾಡುವವರು ಹಿಮ್ಮೇಳದಲ್ಲಿ ಹಾಡುವ ‘ತದ್ಧನ ತಂದನ ॥ ತದ್ಧಿಮಿ ದಿಂದಿಮಿ’ ಇತ್ಯಾದಿ... ಶೊಲ್ಕಟ್ಟನಲ್ಲಿ ಪ್ರಾಚೀನರು ಉಪನಿಷತ್ತಿನಲ್ಲಿ ಹೇಳಿರುವ ವಾಕ್ಯವು ಸಮ್ಮಿಳಿತವಾಗಿದೆ ಎನ್ನುವುದು .

**‘ತದ್ಧ ತದ್ವನ್ ಂ ನಾಮ ತದ್ವನಮಿತ್ಯು ಪಾಸಿತವ್ಯಂ**
**ಸ ಯ ಏತದೇವ್ ಂ ವೇದಾಭಿಹೈನಂ ಸರ್ವಾಣಿ**
**ಭೂತಾನಿ ಸಂವಾಂಚಂತಿ**

**- ಕೇನೋಪನಿಷತ್ತು ೪-೬**

ಮತ್ತು ನ್ಯಾಯ ಶಾಸ್ತ್ರದಲ್ಲಿ ಹೇಳುವ 8 ಬಗೆಯ ಪ್ರಮಾಣಗಳಲ್ಲಿ ಶಬ್ದಪ್ರಮಾಣದ ವಿವರಣೆಯು ಈ ನೃತ್ಯಕ್ಕೆ ಹೊಂದಿಕೊಳ್ಳುತ್ತದೆ ಎನ್ನಲಾಗಿದೆ.

## 'ಆಪ್ತೋಪದೇಶಃ ಶಬ್ದಃ'

ಆದರೆ ಅಲರಿಪು, ಜತಿಸ್ವರ ಶರೀರಕ್ಕೆ ಸಂಬಂಧಿಸಿದುದು. ಆದರೆ ಶಬ್ದ ನೃತ್ಯವು ಶರೀರದ ಕ್ರಿಯೆಯಿಂದ ಮನಸ್ಸಿನ ಕ್ರಿಯೆಗೆ ಹತ್ತುವ ಮೆಟ್ಟಿಲಿನಂತೆ ಎನ್ನುತ್ತಾರೆ ನಾಟ್ಯ ಪ್ರಯೋಗಶೀಲ ವಿದ್ವಾಂಸರು. ಇದನ್ನು ನೃತ್ಯ ಕಾರ್ಯಕ್ರಮದಲ್ಲಿ ಮೂರನೇಯ ನೃತ್ಯಬಂಧವಾಗಿ ಇಟ್ಟುಕೊಳ್ಳಲು ಮುಖ್ಯವಾಗಿ ಮೂರು ಉದ್ದೇಶಗಳಿವೆ.

1 ಅಲರಿಪು ಮತ್ತು ಜತಿಸ್ವರಗಳಲ್ಲಿ ತಾಳ-ಲಯ ಪ್ರಧಾನವಾದ ಆಂಗಿಕಾಭಿನಯಗಳು ಇದ್ದು, ಮಧ್ಯೆ ಶರೀರಕ್ಕೆ ಕಿಂಚಿತ್ ವಿರಾಮ ಕೊಡಬೇಕು.

2 ನಿರ್ವೇದ, ಗ್ಲಾನಿ, ಅನುಮಾನ, ಅಸೂಯಾದಿ ನಾನಾ ಭಾವಾಭಿನಯಗಳನ್ನು ಪ್ರವೇಶ ಮಾಡಿಸಿ, ವ್ಯಾಯಾಮ ಮಾದರಿಯ ನೃತ್ತದ ವಾತಾವರಣದಿಂದ, ಅದರ ರಭಸದಿಂದ ಮನಸ್ಸನ್ನು ಸ್ವಲ್ಪ ವಿಮುಖಗೊಳಿಸುವುದು.

3 ನಾಲ್ಕನೇಯ ಅಂಗವಾದ ವರ್ಣದಲ್ಲಿ ಶರೀರ ವ್ಯಾಯಾಮವು ಅಧಿಕವಾಗಿರುವುದರಿಂದ, ನೃತ್ತ ಮತ್ತು ಜತಿಗಳನ್ನು, ಅಭಿನಯದ ನಿರೂಪಣೆಯನ್ನು ಪ್ರದರ್ಶಿಸಲು ಬೇಕಾಗಿರುವ ಶಾರೀರಿಕ ಸಿದ್ಧತೆ.

ಶಬ್ದದ ಮೂಲ ಸಾಹಿತ್ಯವು ತೆಲುಗು ಭಾಷೆಯಲ್ಲಿ ಇತ್ತೆನ್ನಲು ಸಾಕ್ಷಿಗಳಿವೆ. ಆದರೆ ನಂತರದ ಕಾಲಗಳಲ್ಲಿ ತಮಿಳು ಭಾಷೆಯಲ್ಲಿ ಶಬ್ದ ರಚನೆಗಳಾಗಿ, ಇತ್ತೀಚೆಗೆ ಕನ್ನಡದಲ್ಲಿಯೂ ರಚಿಸಲ್ಪಟ್ಟಿವೆ. ಕನ್ನಡ ಶಬ್ದಗಳಲ್ಲಿ ದ್ವಾರಕೀ ಕೃಷ್ಣಸ್ವಾಮಿಯವರ ಶಬ್ದಗಳು ಜನಪ್ರಿಯ. ಮೇಲತ್ತೂರಿನ ಭಾಗವತರಾದ 1690 ರಿಂದ 1764ರ ವರೆಗೂ ಜೀವಿಸಿದ್ದ ಭರತಂ ಕಾಶೀನಾಥಯ್ಯ, ತಂಜಾವೂರು ಸಹೋದರರು ಶಬ್ದಗಳಿಗೆ ಪ್ರಖ್ಯಾತರು.

ಭರತಂ ಕಾಶೀನಾಥಯ್ಯ ಅವರ ಶಬ್ದಗಳು ಉತ್ತಮ ಶೈಲಿಯಿಂದ



ಕೂಡಿದ್ದು, ಭಾಗವತ ಮೇಳ ನಾಟಕವನ್ನು ಕೂಚಿಪುಡಿ ಸಂಪ್ರದಾಯದಲ್ಲಿ ಕಾಣಿಸುತ್ತಾರೆ. ತಂಜಾವೂರು ಸಹೋದರರ ಶಬ್ದಗಳು ಕಾಂಭೋಜಿರಾಗ, ಮಿಶ್ರಛಾಪು ತಾಳಗಳಲ್ಲಿವೆ. ಗಜೇಂದ್ರಮೋಕ್ಷ, ಮಂಡೂಕಶಬ್ದ, ಭಾಮಾ ಕಲಾಪದಲ್ಲಿ ದಶಾವತರ ಶಬ್ದ ಕೆಲವು ಪ್ರಖ್ಯಾತ ಶಬ್ದಗಳು. ಕೃಷ್ಣ ಶಬ್ದ, ರಾಮಾಪಟ್ಟಾಭಿಶೇಕ ಶಬ್ದ, ಶರಭೋಜ ಶಬ್ದ(1798–1832), ಶಿವಾಜಿ ಶಬ್ದ(1832–1855), ತುಲಜಾಜಿ ಶಬ್ದ (1765–1783) ಇತ್ಯಾದಿಗಳು ದರ್ಬಾರಿನಲ್ಲಿ ಅಭಿನಯಿಸಲ್ಪಡುತ್ತಿದ್ದವುಗಳು.

• • • • • • • • • • • • • •

**ಓರ್ವ ತತ್ವ ಜ್ಞಾನಿಯ ಆತ್ಮ ಆತನ ತಲೆಯಲ್ಲಿ, ಕವಿಯ ಆತ್ಮ ಆತನ ಹೃದಯದಲ್ಲಿ, ಗಾಯಕನ ಆತ್ಮ ಆತನ ಕೊರಳಲ್ಲಿರುತ್ತದೆ. ಆದರೆ ನೃತ್ಯವನ್ನೇ ತನ್ನಲ್ಲಿ ಆವಾಹಿಸಿಕೊಳ್ಳುವ ಕಲಾವಿದೆಯ ಆತ್ಮ ಆಕೆಯ ದೇಹದಲ್ಲೆಲ್ಲಾ ವ್ಯಾಪಿಸಿರುತ್ತದೆ.**

**–ಖಲೀಲ್ ಗಿಬ್ರಾನ್**

ಶುಭ ಕೋರುವ ,
ಉಷಾ ಈಶ್ವರ್ ಭಟ್
ಗೋಪಾಲಕೃಷ್ಣ ಸಂಗೀತ ಶಾಲೆ
ವಿಳಾಸ: ಚಿನ್ಮಯ ಕಾಲೋನಿ
ವಿದ್ಯಾನಗರ
ಕಾಸರಗೋಡು